# ಡಾ. ಸಿ.ಪಿ. ಕೃಷ್ಣಕುಮಾರ್

## ವ್ಯಕ್ತಿ ಪರಿಚಯ



ಡಾ|| ಕೆ. ಬಿ. ಕೆಂಪೇಗೌಡ

ಜನಪ್ರಿಯ ಜಾನಪದ ಪುಸ್ತಕ ಮಾಲೆ-೫೩

# ಡಾ. ಸಿ. ಪಿ. ಕೃಷ್ಣಕುಮಾರ್

## ವ್ಯಕ್ತಿ ಪರಿಚಯ

ಡಾ. ಟಿ. ಕೆ. ಕೆಂಪೇಗೌಡ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

**C. P. Krishna kumar** - A Pen Portrait - By **T. k kempe Gowda.** Pulished by **Karnataka Janapada Parishathu.**
No. 1, Jaladarshini Layout, Near M. S. Ramaiah Hospital
Gate, New BEL Road, Bengaluru-560 054,
Phone : 080-23605033. Janapada Loka : 7201143

ಪ್ರಥಮ ಮುದ್ರಣ : ೨೦೧೦ ಪುಟಗಳು : ೩೬

ಪ್ರತಿಗಳು : ೨೦೦೦

ಬೆಲೆ : ರೂ. ೧೫ (ಹದಿನೈದು ರೂಪಾಯಿ)

ಹಕ್ಕುಗಳು : ಲೇಖಕರಿಗೆ ಸೇರಿವೆ

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ|| ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ|| ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ|| ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು :
**ಚಂದನ ಪ್ರಿಂಟರ್ಸ್.**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಲೇಖಕರಾದ **ಡಾ. ಟಿ. ಕೆ. ಕೆಂಪೇಗೌಡ** ಅವರು **ಡಾ. ಸಿ. ಪಿ. ಕೃಷ್ಣಕುಮಾರ್** ಅವರನ್ನು ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟಣೆ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

ಬೆಂಗಳೂರು
೧೫-೦೫-೨೦೧೦

## ಡಾ॥ ಸಿ. ಪಿ. ಕೃಷ್ಣಕುಮಾರ್ (ಸಿ.ಪಿ.ಕೆ.)

ಆಧುನಿಕ ಕನ್ನಡ ಸಾಹಿತ್ಯದ ಸುಪ್ರಸಿದ್ಧ ಸಾಹಿತಿ, ಕವಿ, ವಿದ್ವಾಂಸ, ವಿಮರ್ಶಕ, ಅನುವಾದಕ ಮತ್ತು ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಕನ್ನಡ ಸಾರಸ್ವತ ಲೋಕದ ಹಿರಿಯರಲ್ಲಿ ಡಾ॥ ಸಿ. ಪಿ. ಕೃಷ್ಣಕುಮಾರ್ ಒಬ್ಬರು. ಕನ್ನಡ ನಾಡು-ನುಡಿ-ಸಂಸ್ಕೃತಿಗೆ ಅನುಪಮ ಕೊಡುಗೆ ನೀಡಿದವರು. ಅವರದು ಬಹುಮುಖ ಪ್ರತಿಭೆ. ಸಿ.ಪಿ.ಕೆ. ಎಂಬ ಕಾವ್ಯನಾಮದಿಂದ ನಾಡಿನಾದ್ಯಂತ ಪರಿಚಿತರಾದವರು.

ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ ಪ್ರತಿಷ್ಠಿತ ರೈತ ಕುಟುಂಬದಲ್ಲಿ 1939ರ ಏಪ್ರಿಲ್ 8ರಂದು ಜನಿಸಿದರು. ತಂದೆ ಪುಟ್ಟೇಗೌಡರು. ತಾಯಿ ಚಿಕ್ಕಮ್ಮ. ತಂದೆ ಸರ್ಕಾರಿ ನೌಕರಿಯಲ್ಲಿದ್ದುಕೊಂಡು ಮೋಜಣಿದಾರರಾಗಿದ್ದರು. ತಾಯಿಯ ಅಕಾಲ ಮರಣದಿಂದ ಸಿ.ಪಿ.ಕೆ. ಶೈಶವದಿಂದಲೂ ಅಜ್ಜಿ ಹಾಗೂ ಸೋದರತ್ತೆಯ ವಾತ್ಸಲ್ಯದಲ್ಲಿ ಬೆಳೆದವರು. ಇವರ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿದ್ಯಾಭ್ಯಾಸ ಜರುಗಿದ್ದು ಚಿಕ್ಕನಾಯಕನಹಳ್ಳಿ ಮತ್ತು ಸಾಲಿಗ್ರಾಮದಲ್ಲಿ. ಗ್ರಾಮೀಣ ಪರಿಸರದ ಮುಗ್ಧತೆ ಮೈಗೂಡಿಸಿಕೊಂಡು ಬೆಳೆದ ಅವರು ಖಾಸಗಿಯಾಗಿ ಲೋಯರ್ ಸೆಕೆಂಡರಿಯನ್ನೂ ಪ್ರೌಢಶಾಲೆಯಲ್ಲಿ ಇಂಗ್ಲೀಷ್ ಮಾಧ್ಯಮದ ವಿಜ್ಞಾನದ ವಿದ್ಯಾರ್ಥಿಯಾಗಿ ರಸಾಯನಶಾಸ್ತ್ರ, ಸಸ್ಯಶಾಸ್ತ್ರ, ಜೀವಶಾಸ್ತ್ರ ವಿಷಯಗಳನ್ನು ಆಯ್ಕೆ ಮಾಡಿಕೊಂಡು ಐಚ್ಛಿಕವಾಗಿಯೂ ಅಧ್ಯಯನ

ಮಾಡಿದವರು.

ಶಿವಮೊಗ್ಗೆಯಲ್ಲಿ ಇಂಟರ್‌ಮೀಡಿಯಟ್ ಕಾಲೇಜಿಗೆ ಸೇರಿ ಅವರು ಜಿ.ಎಸ್.ಎಸ್., ಯು.ಆರ್. ಅನಂತಮೂರ್ತಿ ಅವರ ಶಿಷ್ಯರಾಗಿ ಕನ್ನಡ ಸಾಹಿತ್ಯದತ್ತ ಒಲವನ್ನು ಬೆಳೆಯಿಸಿಕೊಂಡವರು. ಪ್ರತಿಷ್ಠಿತ ಮೈಸೂರಿನ ಮಹಾರಾಜ ಕಾಲೇಜು ಸೇರಿ 1960ರಲ್ಲಿ ಬಿ.ಎ., ಆನರ್ಸ್ ಪದವಿಯನ್ನು, ಭಾರತೀಯ ವಿದ್ಯಾಭವನದಿಂದ 'ಸಂಸ್ಕೃತ ಕೋವಿದ' ಪದವಿಯನ್ನು, 1961ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಪಡೆದರು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಂಶೋಧನಾ ಸಹಾಯಕರಾಗಿ ಸಿ.ಪಿ.ಕೆ. 1961ರಲ್ಲಿ ವೃತ್ತಿ ಜೀವನ ಆರಂಭಿಸಿದರು. ಅನಂತರ ಮಹಾರಾಜ ಕಾಲೇಜು ಅನಂತರ 1967ರಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ಉಪನ್ಯಾಸಕರಾಗಿ ನೇಮಕವಾದರು. ಪ್ರವಾಚಕರಾಗಿ, ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. 1977ರಲ್ಲಿ 'ನಾಗವರ್ಮನ ಕರ್ಣಾಟ ಕಾದಂಬರಿ : ಒಂದು ತೌಲನಿಕ ಮತ್ತು ವಿಮರ್ಶಾತ್ಮಕ ಅಧ್ಯಯನ' ಎಂಬ ಮಹಾಪ್ರಬಂಧಕ್ಕಾಗಿ ಮೈಸೂರು ವಿ.ವಿ.ಯಿಂದ ಡಾಕ್ಟರೇಟ್ ಪದವಿಯನ್ನು ಪಡೆದರು. 1980ರಲ್ಲಿ ಪ್ರಾಧ್ಯಾಪಕರಾಗಿ ನೇಮಕಗೊಂಡು ಅವರು 1999ರಲ್ಲಿ ವೃತ್ತಿಯಿಂದ ನಿವೃತ್ತರಾದರು. 1989–91ರವರೆವಿಗೂ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು. 1999–2000 ಕುವೆಂಪು ಕಾವ್ಯಾಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿಯೂ ಸಹ ಸೇವೆ ಸಲ್ಲಿಸಿದ್ದಾರೆ.

ಡಾ॥ ಸಿ.ಪಿ.ಕೆ. ಅವರು ಒಬ್ಬ ಮಾದರಿ ಅಧ್ಯಾಪಕರಾಗಿ ವೃತ್ತಿ

ಪ್ರವೃತ್ತಿಗಳಲ್ಲಿ ಏಕಾಗ್ರತೆಯಿಂದ ತೊಡಗಿಸಿಕೊಂಡವರು. ವ್ಯಾಸಂಗ, ಬರವಣಿಗೆ ಅವರ ಉದ್ಯೋಗವಾಯಿತು. ಗುಂಪುಗುಳಿತನ, ರಾಜಕೀಯಗಳಿಂದ ದೂರವಾಗಿ, ಸದ್ದುಗದ್ದಲವಿಲ್ಲದೆ ವಿದ್ವತ್ತಿನೆಡೆಗೆ ಸಾಧಕರಾಗಿ ಸಾಗಿದರು. ಸಾಹಿತ್ಯದ ಯಾವ ಪಂಥಗಳಿಗೂ ಸೇರದೆ, ಯಾವುದನ್ನೂ ಅಸಹನೆಯಿಂದ ನೋಡದೆ, ಸ್ವೋಪಜ್ಞಚಿಂತನೆ, ಹರಿತವಾದ ವಿಚಾರಶಕ್ತಿಯಿಂದ ದಾಖಲೆಗಳನ್ನು ನಿರ್ಮಿಸಿದವರು.

ಸಿ.ಪಿ.ಕೆ.ಯವರು ಕನ್ನಡಪರ ಕಾಳಜಿಯಿಂದ ನಾಡು–ನುಡಿಗಳ ಏಳ್ಗೆ ಬಗ್ಗೆ ಚಿಂತನೆ ಮಾಡಿದವರು. ಕನ್ನಡದ ಸ್ಥಾನಮಾನ, ಕನ್ನಡ ನಿರಭಿಮಾನಿಗಳ ಬಗ್ಗೆ ಕಟುವಾಗಿ ಪ್ರತಿಕ್ರಿಯಿಸುತ್ತಾರೆ. ಗೋಕಾಕ್ ಚಳುವಳಿ, ಭಾಷಾಮಾಧ್ಯಮ, ಶಾಸ್ತ್ರೀಯ ಭಾಷಾ ಸ್ಥಾನಮಾನಗಳ ಬಗ್ಗೆ ನಡೆದ ಪ್ರತಿಭಟನೆ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಸಿ.ಪಿ.ಕೆ. ಅವರದು ಸರಳ ಸೌಜನ್ಯಶೀಲ ವ್ಯಕ್ತಿತ್ವ. ಶ್ರೇಷ್ಠ ಭಾಷಣಕಾರರು. ವೈಚಾರಿಕ ಮಾತುಗಾರಿಕೆ, ಪ್ರಸನ್ನ ಶೈಲಿ, ಮಾರ್ಮಿಕತೆ, ಪ್ರತಿಪಾದನೆಯ ಪ್ರಾಮಾಣಿಕತೆ, ನಿರರ್ಗಳ ಭಾಷಾ ಪ್ರವಾಹ, ಅಲ್ಲಲ್ಲಿ ಮಿಂಚುವ ಹಾಸ್ಯಮನೋಧರ್ಮದ ಅವರ ಉಪನ್ಯಾಸ ಆಕರ್ಷಕವೆನಿಸುತ್ತದೆ. ತಾವು ನಗದೆ, ಗಂಭೀರವಾಗಿಯೇ ಹಾಸ್ಯವನ್ನು ನಿರೂಪಿಸುತ್ತಾ, ಇತರರನ್ನು ನಗಿಸುವ ಕಲೆಗಾರಿಕೆ ಅವರಿಗಿದೆ. ಕ್ರಿಯಾಶೀಲ ವ್ಯಕ್ತಿತ್ವದಲ್ಲಿ ಘನತೆ ಗಾಂಭೀರ್ಯಗಳ ಶೋಭೆಯಿದೆ. ಅವರು ಪರಂಪರೆಯ ಪ್ರಜ್ಞೆ, ಆಧುನಿಕ ಪ್ರಜ್ಞೆಯನ್ನು ಮೈಗೂಡಿಸಿಕೊಂಡ ಬಹುಶ್ರುತರು.

ಸಿ.ಪಿ.ಕೆ.ಯವರು ಜಾನಪದ ಸಾಹಿತ್ಯದ ಅಧ್ಯಯನ, ವಿಶ್ಲೇಷಣೆಗಳನ್ನು ಪ್ರಮುಖವಾಗಿ ಕೈಗೊಂಡವರು. ಅವರ 'ಜಾನಪದ ಪ್ರತಿಭೆ', 'ಜಾನಪದ ಸರಸ್ವತಿ', 'ಜನಪದ ಗೀತೆ', 'ಜಾನಪದ ಜಾಗರ',

'ಜಾನಪದ ಸಾಹಿತ್ಯ ಪ್ರವೇಶಿಕೆ', 'ಒಗಟು ಮತ್ತು ಗಾದೆ' ಮುಂತಾದ ಕೃತಿಗಳಲ್ಲಿ ಅವರ ಜಾನಪದ ಶ್ರದ್ಧೆ, ಸಾಹಿತ್ಯ ಕುರಿತ ಅಭಿಮಾನ, ಚಿಂತನೆ ಅನಾವರಣಗೊಂಡಿರುವುದನ್ನು ನೋಡಬಹುದು. ಜನಪದ ಸಾಹಿತ್ಯ ಕುರಿತ ಅವರ ಲೇಖನಗಳಲ್ಲಿ ಸಾಹಿತ್ಯಕ, ಸಾಂಸ್ಕೃತಿಕ ಮಹತ್ವವನ್ನು ಕುರಿತು ಆನ್ವಯಿಕ ವಿಮರ್ಶೆಯಿದೆ. 'ಜಾನಪದ ಚಟುವಟಿಕೆಗಳು 1970ರ ದಶಕದಲ್ಲಿ ಇನ್ನೂ ಆರಂಭದ ದೆಸೆಯಲ್ಲಿರುವಾಗ ಜನಪದ ಸಾಹಿತ್ಯವನ್ನು ಶಿಷ್ಟದ ನೆಲೆಯಲ್ಲಿಯೇ ನೋಡಲಾಗುತ್ತಿತ್ತು. ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದವರೆಲ್ಲ ಶುದ್ಧ ಸಾಹಿತಿಗಳಾದುದರಿಂದ ಅದರಲ್ಲಿನ ಸಾಹಿತ್ಯಕ ಅಂಶಗಳ ಕಡೆಗೆ ತಮ್ಮ ಅಧ್ಯಯನವನ್ನು ಕೇಂದ್ರೀಕರಿಸಲಾಗಿತ್ತು. ಭಾರತೀಯ ಕಾವ್ಯ ಮೀಮಾಂಸೆಯ ನೆಲೆಯಲ್ಲಿ ಜನಪದ ಕಾವ್ಯ, ಅದರ ಬೇರೆ ಬೇರೆ ಸಂಗತಿಗಳನ್ನು ನಿರ್ಣಯಿಸುವ ಪರಿಪಾಠವಿತ್ತು. ಹಾಗೆ ಮಾಡುವುದರ ಮೂಲಕ ಜನಪದ ಕಾವ್ಯವೂ ಶಿಷ್ಟ ಕಾವ್ಯಕ್ಕಿಂತ ಯಾವುದರಲ್ಲು ಕಡಿಮೆಯಿಲ್ಲ ಎಂಬುದನ್ನು ಸಾಬೀತುಪಡಿಸುವ ಸಂದರ್ಭ ಅದು. ಜನಪದ ಸಾಹಿತ್ಯದ ಹಿರಿಮೆ ಗರಿಮೆಗಳು ಶಿಷ್ಟ ಸಾಹಿತ್ಯದ ಸಮಕ್ಕೆ ನಿಲ್ಲುವಂಥವು ಎಂಬುದರ ಸಮರ್ಥನೆಯಲ್ಲಿ ಜನಪದ ಸಾಹಿತ್ಯ ವಿಮರ್ಶನೆಯಾಯಿತು. ಸಾಹಿತ್ಯಕ ನೆಲೆಯಲ್ಲಿ ಕಾವ್ಯಗುಣಗಳನ್ನು ಎತ್ತಿ ಹಿಡಿದು ಜಾನಪದದ ಸ್ಥಾನಮಾನಗಳನ್ನು ನಿರ್ಣಯಿಸುವ ವಿಮರ್ಶೆಯ ವಿಷಯದಲ್ಲಿ ಸಿಪಿಕೆ ಅವರ ಸಾಧನೆ ಹಿರಿದು. ಜೀಶಂಪ ಅವರ ಮಾತಿನಲ್ಲಿ ಹೇಳುವುದಾದರೆ 'ಜನಪದ ಗೀತೆಗಳನ್ನು ಕಾವ್ಯ ವಿಮರ್ಶೆಯ ಸೂತ್ರಗಳಲ್ಲಿ ಶಾಸ್ತ್ರೀಯ ವಿವೇಚನೆಗೆ ಒಳಪಡಿಸಿ ವಿಶ್ಲೇಷಿಸಿರುವ ಪ್ರತಿಭಾಪೂರ್ಣ ಪ್ರಯತ್ನಗಳನ್ನು ಸಿ.ಪಿ.ಕೆ. ಅವರ ಪ್ರಬಂಧಗಳಲ್ಲಿ ಕಾಣಬಹುದು (ಜಿ. ಆರ್. ತಿಪ್ಪೇಸ್ವಾಮಿ).

ಸಿ.ಪಿ.ಕೆ. ಅವರು ಸಾಹಿತ್ಯಕ ಜಾನಪದ ವಿದ್ವಾಂಸರು. ಅವರು ತಾನು ಎಲ್ಲೋ ಇದ್ದೇನೆಂದು ದೊಡ್ಡದಾಗಿ ಭಾವಿಸುವವರಲ್ಲ. ಇರುವ ನೆಲೆಯಲ್ಲಿ, ಪರಿಸ್ಥಿತಿಯಲ್ಲಿ ತಮ್ಮನ್ನು ತಮ್ಮ ಸಾಹಿತ್ಯ ನಿರ್ಮಿತಿಯ ಜೊತೆಯಲ್ಲಿ ಗುರ್ತಿಸಿಕೊಳ್ಳುವವರು. ಜನಪದ ಸಾಹಿತ್ಯದ ಬಗ್ಗೆ ಖಚಿತ ಮಾತುಗಳಲ್ಲಿ ಹೇಳಬಲ್ಲರು. ಅದರ ಮುಖಗಳು ಮತ್ತು ಪರಿಮಿತಿಗಳನ್ನು ನಿಖರವಾಗಿ ಗುರುತಿಸಬಲ್ಲರು. ಅಳತೆಗೆ ತಕ್ಕ ಮಾತು, ಮಾತಿಗೆ ಸೇರಿದ ಅರ್ಥ, ಅರ್ಥದ ಉದ್ದೇಶವನ್ನು ಎಳೆಹಿಡಿದು ದಾಖಲಿಸಬಲ್ಲರು. ತಮ್ಮ ಬರಹದಲ್ಲಿ ಅವಸರ, ಅಹಂಕಾರ ತೋರಿಸಲಾರರು. ಕೀರ್ತಿಯನ್ನು ಉದ್ದೇಶಿಸಲಾರರು. ಅವರಿಗಿರುವುದು ಸ್ಪಷ್ಟ-ನಿಷ್ಠಬದ್ಧತೆ ಮಾತ್ರ. ಜನಪದ ಸಾಹಿತ್ಯ ಮತ್ತು ಅದರ ಮುಖಗಳನ್ನು ವಿಶ್ಲೇಶಿಸುವಾಗ ತಾವು ಒಪ್ಪಿಕೊಂಡ ಸಂಸ್ಕೃತಿಯ ಸಂಪನ್ನತೆಯನ್ನು ಗಾಢವಾಗಿ ಪ್ರೀತಿಸುತ್ತ ಅದಕ್ಕೆ ವ್ಯಾಖ್ಯಾನವೊದಗಿಸುತ್ತ, ಅದರ ಅರ್ಥಗಳನ್ನು ಬಿಡಿಸುತ್ತ, ಸಂತೋಷಪಡಿಸುತ್ತ ಒಬ್ಬ ಸಂಸ್ಕೃತಿಯ ಸರದಾರನಂತೆ ಅದರ ಬಗ್ಗೆ ಇನ್ನಿಲ್ಲದ ಪ್ರೀತಿಯನ್ನು ತೋರಿಸುತ್ತಾ ಹೋಗುತ್ತಾರೆ.

ಸಿ.ಪಿ.ಕೆ. ಅವರ 'ಜಾನಪದ ಪ್ರತಿಭೆ' 1969ರಲ್ಲಿ ಹೊರಬಂದ ಕೃತಿಯಾಗಿದೆ. ಈ ಕೃತಿಯಲ್ಲಿ ಎಂಟು ಲೇಖನಗಳಿವೆ. ಒಗಟುಗಳು, ಜನಪದ ಕಾವ್ಯದಲ್ಲಿ ಧ್ವನಿ, ಒಂದು ಭಾವಗೀತೆ ; ಮಳೆಯ ಹಾಡು, ಜನಪದ ಕವಿಗಳಲ್ಲಿ ಶಿವಪ್ರಜ್ಞೆ, ಜನಪದ ಕವಿಗಳಲ್ಲಿ ಮೃತ್ಯು ಮತ್ತು ಪ್ರಣಯ, ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಗ್ರಹ, ಕೆಲವು ಜನಪದ ಗೀತಸಂಕಲನಗಳು, ಜನಪದ ಸಾಹಿತ್ಯದ ಒಂದು ಗಡಿಕಲ್ಲು ಇವೇ ಅದರಲ್ಲಿರುವ ಎಂಟು ಲೇಖನಗಳು. ಕವಿ ಸಹಜವಾದ ಆರ್ದ್ರ ಹೃದಯದಿಂದ ಜನಪದ ಸಾಹಿತ್ಯವನ್ನು ಅಭ್ಯಸಿಸಿ, ಅದರ ಸಾಹಿತ್ಯ

ಸೌಂದರ್ಯವನ್ನು ಅನುಭವಿಸಿ ಬರೆದ ಪಾಂಡಿತ್ಯಪೂರ್ಣವಾದ ಲೇಖನಗಳು ಇಲ್ಲಿವೆ. ಸಿ.ಪಿ.ಕೆ. ಅವರು ಕೃತಿಯ ಮುಮ್ಮಾತುವಿನಲ್ಲಿ ಜನಪದ ಸಾಹಿತ್ಯದ ಬಗ್ಗೆ ಕೆಲವು ಮಾತುಗಳನ್ನು ನುಡಿದಿದ್ದಾರೆ. 'ಗ್ರಾಮ್ಯ ಭಾಷೆಯಲ್ಲಿ ಬರೆದದ್ದೆಲ್ಲ ಜನಪದ ಸಾಹಿತ್ಯ ಎಂಬುದು ತಪ್ಪು ತಿಳುವಳಿಕೆ. ಗ್ರಾಮ್ಯಭಾಷೆ ಜನಪದ ಸಾಹಿತ್ಯದ ಒಂದು ಲಕ್ಷಣ ನಿಜ ; ಆದರೆ ಪ್ರೌಢ ಸಾಹಿತ್ಯಕ್ಕೂ ಜನಪದ ಸಾಹಿತ್ಯಕ್ಕೂ ನಡುವೆ ಅದೊಂದರಿಂದಲೆ ಗೆರೆಯೆಳೆಯುವಂತಿಲ್ಲ. ಮನೋಧರ್ಮದಲ್ಲಿ, ಸಂಸ್ಕೃತಿಯಲ್ಲಿ, ಪ್ರತಿಭಾ ಸ್ವರೂಪದಲ್ಲಿ ಜಾನಪದರಿಗೂ ನಾಗರಿಕರಿಗೂ ಮೂಲಭೂತವಾಗಿಯೇ ಭೇದವಿದೆ. ಈ ದೃಷ್ಟಿಯಿಂದ ನೋಡಿದಾಗ, ವಚನ ಸಾಹಿತ್ಯ ಮತ್ತು ಜನಪದ ಸಾಹಿತ್ಯ ಅಭಿನ್ನವೆನ್ನಬಹುದು. ಜೀವನ ಮೌಲ್ಯಗಳಲ್ಲಿ, ಪ್ರೇರಣೆ-ಅಭಿವ್ಯಕ್ತಿಗಳಲ್ಲಿ, ಭಾಷಾ ಬಳಕೆಯಲ್ಲಿ ವಚನಕಾರರಿಗೂ ಜನಪದ ಕವಿಗಳಿಗೂ ಅಂತರವಿಲ್ಲ. ಆದರೆ ಒಂದು ವ್ಯತ್ಯಾಸ ; ವಚನ ಸಾಹಿತ್ಯದಲ್ಲಿ ಧರ್ಮ ಅಧ್ಯಾತ್ಮಗಳೆ ವಸ್ತುವಾದುದರಿಂದ ಅಲ್ಲಿ ಜನಜೀವನ ಕೇವಲ ಅಭಿವ್ಯಕ್ತಿ ಪರಿಕರವಾಗಿ ಬಳಕೆಯಾಯಿತು. ಜನಪದ ಸಾಹಿತ್ಯದಲ್ಲಾದರೆ ಜೀವನ ಸಮಸ್ತವೂ ವಸ್ತುವಾಯಿತು. ಆದ್ದರಿಂದ ವಚನ ವಾಙ್ಮಯದಲ್ಲಿ ಜಾನಪದ ಸತ್ವ ಸಂಪೂರ್ಣವಾಗಿ ಆವಿಷ್ಕೃತವಾಗದುದು ಸಹಜ, ಅನಿವಾರ್ಯ. ಅಂತೂ ವಚನಸಾಹಿತ್ಯ ಜನಪದಸಾಹಿತ್ಯಗಳೆರಡೂ ಪರಸ್ಪರ ಪೂರಕವಾಗಿ ನಿಂತು ಕನ್ನಡದ ಅಮೃತ ಕಲಶಗಳಾಗಿ ಪರಿಣಮಿಸಿದೆ ಎಂದು ಹೇಳುತ್ತಾರೆ. ಹೀಗೆ ಜನಪದ ಸಾಹಿತ್ಯದ ನೆಲೆಬೆಲೆಗಳನ್ನು ಸ್ಪಷ್ಟವಾಗಿ ಸಿ.ಪಿ.ಕೆ. ಅವರು ಗುರುತಿಸುತ್ತಾರೆ.

ಸಿ.ಪಿ.ಕೆ. ಅವರು ಹುಟ್ಟಿದ ಕೆಲ ದಿನಗಳಲ್ಲೇ ತನ್ನ ತಾಯಿಯನ್ನು ಕಳೆದುಕೊಂಡು ಅಜ್ಜಿ ಆಶ್ರಯದಲ್ಲಿದ್ದುಕೊಂಡು ಜನಪದ ಸಾಹಿತ್ಯದ

ಹಾಲನ್ನು ಕುಡಿದು ಬೆಳೆದವರು. ಆದ್ದರಿಂದಲೇ ಅವರು ಸೃಜನಶೀಲ ಪ್ರತಿಭೆಯ ಜೊತೆಗೆ ಜಾನಪದ ಪ್ರತಿಭೆಯಾಗಿಯೂ ನಮ್ಮ ನಡುವೆ ಕಾಣಿಸಿಕೊಂಡರು. ಜನಪದದಂತಹ ಶಕ್ತಿಯ ಕೆಲವು ಮುಖಗಳನ್ನು, ವಿಮರ್ಶಾ ನೆಲೆಗಳನ್ನು 'ಜಾನಪದ ಪ್ರತಿಭೆ' ಪುಸ್ತಕದಲ್ಲಿ ಮೂಡಿಸಿದ್ದಾರೆ.

'ಒಗಟುಗಳು' ಬಗ್ಗೆ ಬರೆಯುತ್ತಾ ಸಿ.ಪಿ.ಕೆ.ಯವರು ಒಗಟುಗಳು ಕೂಡ ಅಜ್ಞಾತ ಗ್ರಾಮೀಣ ಜನತೆಯ ಸಂಸೃಷ್ಟಿ ; ಸಮಷ್ಟಿಚಿತ್ತದ ಅಭಿವ್ಯಕ್ತಿ ಎನ್ನುತ್ತಾರೆ.

ಮೂಲತಃ ಒಗಟುಗಳು ಜಾನಪದ ನಿರ್ಮಿತಿಯಾಗಿದ್ದರೂ, ವಿದ್ವತ್ಕವಿಗಳು ಅವುಗಳ ರಚನೆಗೆ ಪ್ರಯತ್ನಿಸಿ ಈ ಸಾಹಿತ್ಯವನ್ನು ಬೆಳೆಸಿರುವುದುಂಟು ಎಂಬುದಾಗಿ ಸಿ.ಪಿ.ಕೆ. ಅವರ ಅಭಿಪ್ರಾಯ. ಒಗಟುಗಳೂ ಕಾವ್ಯದ ಒಂದು ಪ್ರಕಾರವಾಗಿದೆ. ಕಾವ್ಯಮೀಮಾಂಸೆಯ ನೆಲೆಯಲ್ಲಿ 'ಒಗಟು'ಗಳ ವಿಷಯವನ್ನು ಸಿ.ಪಿ.ಕೆ. ಅವರು ಚರ್ಚಿಸಿದ್ದಾರೆ. ಹಲವಾರು ಕನ್ನಡದ ಒಗಟುಗಳ ಸ್ವಾರಸ್ಯ ಸೌಂದರ್ಯಗಳನ್ನು ಹಲವಾರು ನಿದರ್ಶನಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. . ಒಗಟುಗಳಲ್ಲಿ ಕಂಡುಬರುವ ಸಾದೃಶ್ಯ ಪ್ರಜ್ಞೆಯನ್ನು ಹೊರಗೆಡವಿದ್ದಾರೆ. ಒಗಟುಗಳ ಬಗೆಗಳನ್ನು ಈ ಲೇಖನದಲ್ಲಿ ತಿಳಿಸಿದ್ದಾರೆ.

ಎರಡನೆಯ ಲೇಖನವಾದ 'ಜನಪದ ಕಾವ್ಯದಲ್ಲಿ ಧ್ವನಿ' ಎಂಬ ವಿಷಯದ ಮೇಲೆ ಬೆಳಕುಚೆಲ್ಲಿದ್ದಾರೆ. ಭಾರತೀಯ, ಪಾಶ್ಚಾತ್ಯ ಕಾವ್ಯಮೀಮಾಂಸೆಯ ವಿಚಾರಗಳ ವಿವರಗಳನ್ನು ಕೊಡುವುದರ ಮೂಲಕ ಜನಪದ ಕವಿತೆಯಲ್ಲಿ ಕಂಡುಬರುವ ಧ್ವನಿಯನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಜನಪದ ಕಾವ್ಯಧಾರೆ ಬೆಳಗಿನ ಜಾವದ ತಂಪಿನಲ್ಲಿ, ಪ್ರಶಾಂತಿಯಲ್ಲಿ, ಭೂಮಿತಾಯಿಯ ಸ್ಮರಣೆಯಿಂದ ಪ್ರಾರಂಭಗೊಳ್ಳುತ್ತದೆ.

ಎದ್ದೊಂದು ಗಳಿಗೇಲಿ ಯಾರ್‍ಯಾರ ನೆನೆಯಲಿ
ಎಳ್ಳು ಜೀರಿಗೆ ಬೆಳೆಯೋಳ-ಭೂಮಿತಾಯ
ಎದ್ದೊಂದು ಗಳಿಗೆ ನೆನೆದೇನು

ಬದುಕಿಗೆ ಆಧಾರವಾದ ಭೂಮಿಯನ್ನು ಪ್ರಾರ್ಥಿಸುವಲ್ಲಿನ ಅರ್ಥ, ಧ್ವನಿಯನ್ನು ಸಿ.ಪಿ.ಕೆ. ಅವರು ವೈಜ್ಞಾನಿಕವಾಗಿ ನಿರೂಪಿಸಿದ್ದಾರೆ. 'ಇವಳು ದೇವಿ ಮಾತ್ರವಲ್ಲ, ತಾಯಿ ; ನಮ್ಮ ಮೈಯ ಒಂದಂಶ ಇವಳಿಂದ ಬಂದದ್ದು. ದೇಹವನ್ನು ನಾವು ಪಾರ್ಥಿವ, ಮೃಣ್ಮಯ ಎಂದು ವರ್ಣಿಸುವಲ್ಲಿ, ಈ ಭೂಮಾತೆಯ ರಕ್ತಮಾಂಸಗಳಿಂದಲೇ ಅದು ನಿರ್ಮಿತವೆಂಬುದು ಅಭಿಪ್ರಾಯ. ಇಂಥ ತಾಯಿಯನ್ನು ಜನಪದ ಕವಿಗಳು ಎದ್ದೊಂದು ಗಳಿಗೆಯಲ್ಲಿ ಧ್ಯಾನಿಸುತ್ತಾರೆ. ಸ್ವಾರಸ್ಯವೇನೆಂದರೆ, ಈ ಸ್ಮರಣೆ ಬೆಳಗಿನ ಹೊತ್ತು ನಿದ್ದೆಯಿಂದ ಎದ್ದು ಒಂದು ಗಳಿಗೆಗೆ ಮಾತ್ರ ಮಿತವಾದುದಲ್ಲ ; ಜೀವನದಲ್ಲಿ ಅನವರತ ನಡೆಯುವಂಥದು' ಎಂಬ ಅಂಶವನ್ನು ಗುರುತಿಸಿದ್ದಾರೆ. 'ಎದ್ದೊಂದು ಗಳಿಗೇಲಿ' ಎಂಬ ಮಾತಿನಲಿ 'ಭೂಮಿತಾಯಿ' ಎಂಬ ಮಾತಿನಲ್ಲಿ ಅಗಾಧ ಅರ್ಥವಿರುವುದನ್ನು ಸಿ.ಪಿ.ಕೆ. ಗುರುತಿಸುತ್ತಾರೆ.

ಕಾಯಕಗಳಲ್ಲಿ ನಿರತರಾದ ಜನಪದರದು ಬೆಳಗಿನಿಂದ ಸಂಜೆಯವರೆಗೆ ದುಡಿಮೆ. ದುಡಿಮೆ ಮುಗಿದ ಬಳಿಕ ಮಾತ್ರವೇ ಅವರಿಗೆ ಗುಡಿಗೆ ಹೋಗಲು ಬಿಡುವು. ಈ ಅಂಶವನ್ನು ಜನಪದ ಕವಿ ಹೇಗೆ ಹೇಳಿದ್ದಾನೆ ಎಂಬುದನ್ನು ಸಿ.ಪಿ.ಕೆ. ಅವರು ಧ್ವನಿಪೂರ್ಣವಾಗಿ ವಿಶ್ಲೇಷಿಸುತ್ತಾರೆ.

ಹೊತ್ತು ಮುಳುಗಿದರೇನು ಕತ್ತಲಾದರೇನು
ಅಪ್ಪ ನಿನ್ನ ಗುಡಿಗೆ ಬರುವೆನು ಭೈರವ

ಮುತ್ತಿನ ಕದವ ತೆಗೆದಿರೊ

ದೇವರೂ ತಮ್ಮಂತೆ ಒಬ್ಬ ವ್ಯಕ್ತಿ. ತಮ್ಮಂತೆಯೆ ನಡೆದುಕೊಳ್ಳುವವನು ಎಂದು ಭಾವಿಸಿದವರು ಜಾನಪದರು. ಹೊತ್ತು ಮುಳುಗಿದ ಮೇಲೆ ವ್ಯಾಪಾರಿಗಳು ಅಂಗಡಿ ಮುಚ್ಚುವಂತೆ, ಅಧಿಕಾರಿಗಳು ಕಚೇರಿ ಮುಚ್ಚುವಂತೆ ದೇವರೂ ಬಾಗಿಲು ಹಾಕಿಕೊಂಡು ಹೊರಟು ಹೋದಾನು, ತಮಗೆ ಅವನ ದರ್ಶನ ಭಾಗ್ಯ ತಪ್ಪಿಹೋದೀತು ಎಂದು ಅವರು ಕಳವಳಿಸುತ್ತಾರೆ. ಮುತ್ತಿನ ಕದವನ್ನು ತೆಗೆದಿರು ಎಂದು ಅಂಗಲಾಚುತ್ತ ಕತ್ತಲಲ್ಲಿ ಓಡೋಡಿ ಬರುವ ಆರ್ತಚೇತನದ ಚಿತ್ರವೊಂದು ಈ ಪದ್ಯದಲ್ಲಿ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ' ಎಂಬ ಅಂಶವನ್ನು ಗಮನಿಸಿ ಕಾವ್ಯದಲ್ಲಿನ ಧ್ವನಿಯನ್ನು ಸಿ.ಪಿ.ಕೆ. ಅವರು ತುಂಬ ಸಮರ್ಥವಾಗಿ, ವೈಜ್ಞಾನಿಕವಾಗಿ ವಿಶ್ಲೇಷಿಸಿದ್ದಾರೆ.

ಜನಪದ ತ್ರಿಪದಿಗಳಲ್ಲಿ ಕಂಡುಬರುವ ವಾತ್ಸಲ್ಯದ ಧ್ವನಿಯನ್ನು ತುಂಬಾ ಸಮರ್ಥವಾಗಿ ಕಟ್ಟಿಕೊಟ್ಟಿದ್ದಾರೆ.

ಆಡಿ ಬಾ ಕಂದಯ್ಯ ಅಂಗಾಲ ತೊಳೆದೇನು
ತೆಂಗಿನಕಾಯ ತಿಳಿನೀರ –ನಾ ತಂದು
ಬಂಗಾರದ ಪಾದ ತೊಳೆದೇನು

ಆಡಿಬಂದ ಮಗುವಿನ ಅಂಗಾಲು ತೊಳೆಯಬೇಕಾದರೆ ನೀರಿಲ್ಲವೆ? ತೆಂಗಿನ ಕಾಯ ತಿಳಿನೀರೆ ಏತಕ್ಕಾಗಬೇಕು ? ಕಾರಣವಿಷ್ಟೆ ; ಅದು ಭಾವಶುದ್ಧಿಯ, ನಿರ್ಮಲ ಪ್ರೀತಿಯ ಸಂಕೇತ ಎಂಬುದಾಗಿ ತಿಳಿಸುತ್ತಾರೆ. 'ದೇವರಿಗಾದರೂ ನಾವು ತೆಂಗಿನಕಾಯಿ ಅರ್ಪಿಸುವುದೇತಕ್ಕೆ ? ತೆಂಗಿನಕಾಯಿ ಮಣ್ಣಿನ ಸೋಂಕಿನಿಂದ ದೂರವಾಗಿ ಬಹು ಎತ್ತರದಲ್ಲಿ ಗಗನ ಸ್ಪರ್ಶಿಯೆಂಬಂತೆ

ತೂಗುತ್ತಿರುತ್ತದೆ. ಅದಕ್ಕೆ ಕೊಳೆ ಹತ್ತಲಾರದು, ಧೂಳು ಕವಿಯಲಾರದು; ಅದರ ಕಠಿಣವಾದ ಹೊದಿಕೆ ಚಿಪ್ಪುಗಳನ್ನು ಭೇದಿಸಿ ಯಾವ ಕ್ರಿಮಿಕೀಟಗಳೂ ಅದನ್ನು ಕೆಡಿಸಲಾರವು. ಅದರೊಳಗಿರುವ ನೀರು ಸುರಕ್ಷಿತ, ಪರಿಶುದ್ಧ, ಮೀಸಲು. ಈ ತೆಂಗಿನಕಾಯಿ, ಅದರೊಳಗಿನ ನೀರು ಭವದೂರವಾದ ನಿಷ್ಕಾಮೂರ್ವಕವಾದ ಭಕ್ತಿಗೆ ದ್ಯೋತಕ ; ಎಂತಲೇ ಅದು ಯಾವಾಗಲೂ ದೇವರಿಗೆ ಸಮರ್ಪಿತ. ಮಗುವೂ ಭಗವತ್ ಸ್ವರೂಪಿಯೇ ; ಅವನ ಪಾದವನ್ನಾಗಲಿ, ಮುಖವನ್ನಾಗಲಿ ತೊಳೆಯುವುದು ನೆಲದ ನೀರಿಂದಲ್ಲ ; ಆಕಾಶ ಜಲದಿಂದ, ತೆಂಗಿನಕಾಯ ತಿಳಿನೀರಿಂದ' ಎಂಬುದಾಗಿ ಸಿ.ಪಿ.ಕೆ. ಅವರು ನಿಖರವಾಗಿ, ಧ್ವನಿಪೂರ್ಣವಾಗಿ ಸ್ಪಷ್ಟಪಡಿಸುತ್ತಾರೆ. ಹೀಗೆ ಹಲವಾರು ಜನಪದ ಪದ್ಯಗಳನ್ನು ಆಯ್ಕೆ ಮಾಡಿಕೊಂಡು ವಿಮರ್ಶಿಸಿದ್ದಾರೆ. ಪ್ರತಿಯೊಂದು ಗೀತೆಗಳಲ್ಲಿ ಬರುವ ಅಂಶವನ್ನು ಸೂಕ್ಷ್ಮವಾಗಿ ಗುರುತಿಸಿ ವಿಶ್ಲೇಷಣೆಗೊಳಪಡಿಸಿದ್ದಾರೆ. ಹೀಗೆ ತೌರಿನ ಬಗ್ಗೆ, ದಾಂಪತ್ಯದ ಬಗ್ಗೆ ಇರುವ ಜನಪದ ಪದ್ಯಗಳಲ್ಲಿ ಹೊಮ್ಮುವ ಧ್ವನಿಯನ್ನು ಚೆನ್ನಾಗಿ ಪರಿಶೀಲನೆ ಮಾಡಿದ್ದಾರೆ. 'ಜಾನಪದ ಕಾವ್ಯವೂ ತಾಯ ಕಿವಿಯೋಲೆಯಂತೆ, ಎದೆ ಹಾಲಿನಂತೆ ಪೂಜ್ಯವಾದುದು, ಮಂಗಲಪ್ರದವಾದುದು. ಈ ಮಾತೃ ಸಮ್ಮಿತವನ್ನು ಮತ್ತಾವ ಪ್ರಭು ಸಮ್ಮಿತ ಕಾಂತಾಸಮ್ಮಿತಗಳೂ ಸರಿಗಟ್ಟಲಾರವು ಎಂದರೆ ಅತ್ಯುಕ್ತಿ ದೋಷವಿಲ್ಲ. ವೇಶ್ಯಾ ಸಮ್ಮಿತವಂತೂ ಇದಕ್ಕೆ ಬಹುದೂರ.

ಜಾನಪದ ಕವಿತೆಯ ಒಂದೊಂದು ಮಾತು ಕೂಡ ಆಹಾರ ಸಾರವನ್ನೆಲ್ಲ ಭಟ್ಟಿಯಿಳಿಸಿ ಸಿದ್ಧಗೊಳಿಸಿದ ವಿಟಮಿನ್ ಗುಳಿಗೆಯಿದ್ದಂತೆ. ಆಕಾರ ಕಿರಿದು, ಸತ್ತ್ವ ಅಪಾರ. ಈ ತ್ರಿಪದಿಗಳು ವಾಮನನಂತೆ

ತೇಲುನೋಟಕ್ಕೆ ಕಂಡರೂ ಪರಿಭಾವಿಸಿದಾಗ ತ್ರಿವಿಕ್ರಮ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತವೆ ಅಥವಾ ಇವು ದ್ರೌಪದೀ ವಸ್ತ್ರದಂತೆ ಎಷ್ಟು ಎಳೆದರೂ ಅರ್ಥ ಪದರಗಳು ಉಳಿದೇ ಇರುತ್ತವೆ. ಈ ಅಕ್ಷಯಕ್ಕೆ ಅಲ್ಲಿ ಭಗವದ್ಭಕ್ತಿ ಕಾರಣವಾದಂತೆ ಇಲ್ಲಿ ಸರಸ್ವತೀ ಲಬ್ಧವಾದ ಪ್ರೀತಿಭಕ್ತಿ ಕಾರಣವಾಗಿದೆ' ಎಂಬ ಮಾತುಗಳಲ್ಲಿ ಜನಪದ ಕಾವ್ಯದ ಸತ್ವ ಎಷ್ಟಿದೆ ಎಂಬುದರ ಅರಿವನ್ನು ಸಿ.ಪಿ.ಕೆ. ಅವರು ಓದುಗರಿಗೆ ಮಾಡಿಸುತ್ತಾರೆ.

'ಒಂದು ಭಾವಗೀತೆ : ಮಳೆಯ ಹಾಡು' ಎಂಬ ಲೇಖನದಲ್ಲಿ ಜನಪದರ ಸರಳತೆ, ಮುಗ್ಧತೆ ಅನುಭವಗಳನ್ನು ಮಳೆಯ ಹಾಡುವಿನಲ್ಲಿ ವಿಶ್ಲೇಷಿಸಿದ್ದಾರೆ. 'ಮಲ್ಲಿಗೆ ದಂಡೆ' ಸಂಕಲನದಲ್ಲಿ ಬರುವ 'ಮಳೆ ಹಾಡು' ಗೀತೆಯನ್ನು ವಿಶ್ಲೇಷಿಸಿದ್ದಾರೆ. ಸಿ.ಪಿ.ಕೆ. ಅವರು ಜನಪದ ಗೀತೆಗಳನ್ನು ಎರಡು ದೃಷ್ಟಿಕೋನಗಳಿಂದ ವಿಶ್ಲೇಷಿಸಿದ್ದಾರೆ.

1) ಕವಿತಾ ಕಲೆಯ ದೃಷ್ಟಿಯಿಂದ

2) ಗೀತೆಗಳಲ್ಲಿ ಅಭಿವ್ಯಕ್ತವಾಗಿರುವ ಜನತೆಯ ವಿಶಿಷ್ಟ ಸಂಸ್ಕೃತಿ ಮನೋಧರ್ಮಗಳನ್ನು ಕುರಿತ ದೃಷ್ಟಿ

'ಮಳೇಹಾಡು' ಎಂಬ ಗೀತೆಯನ್ನು ತುಂಬ ಪರಿಣಾಮಕಾರಿಯಾಗಿ ಸಿ.ಪಿ.ಕೆ. ಅವರು ವಿಶ್ಲೇಷಿಸಿದ್ದಾರೆ. ಅವರು ಈ ಭಾವಗೀತೆಯನ್ನು ಕುರಿತು ಹೀಗೆ ಹೇಳುತ್ತಾರೆ: 'ಭಾವಗೀತೆಯಲ್ಲಿ ಮಳೆರಾಯನ ಬಗ್ಗೆ ಅವರ ಮನೋಭಾವವೇನು ? ಬರಬೇಕಾದ ಕಾಲದಲ್ಲಿ ಆತ ಬರಲಿಲ್ಲ. ಏನೆಲ್ಲ ದುರಂತ ನಡೆದುಹೋಯಿತು ! ಎಂಥ ಲಯ ಸಂಭವಿಸಿತು ! ನಿಜವಾಗಿಯೂ ಮಳೆರಾಯ ತನ್ನನ್ನು ನಂಬಿದವರನ್ನು ವಂಚಿಸಿದ. ಆದರೆ ಈ ಗೀತೆಯಲ್ಲಿ ಆಕ್ಷೇಪಣೆಯ ಪ್ರತಿಭಟನೆಯ, ತಿರಸ್ಕಾರದ, ಧಿಕ್ಕಾರದ ಒಂದೇ ಒಂದು ಸೊಲ್ಲು ಕೂಡ ಸಿಗುವುದಿಲ್ಲ. ತಮಗೊದಗಿದ ಅವಸ್ಥೆಯನ್ನು ಜನತೆ

ಶರಣಾಗತಿಯ ನಿಲುವಿನಿಂದ ಶಾಂತವಾಗಿ ಒಪ್ಪಿಕೊಂಡಿರುವುದು, ಅಪ್ಪಿಕೊಂಡಿರುವುದು ಸುವಿದಿತವಾಗುತ್ತದೆ. ಇಡೀ ಕವನವೆ ಮಳೆರಾಯನನ್ನು ಕುರಿತು ಹೃತ್ಪೂರ್ವಕ ಪ್ರಾರ್ಥನೆಯಾಗಿದೆ. ಸ್ವಾಗತ ಗೀತೆಯಾಗಿದೆ. ತಮಗೆ ಬಂದ ಪಾಡನ್ನು ಅವರು ಹಾಡನ್ನಾಗಿ ಪರಿವರ್ತಿಸಿದ್ದಾರೆ ಎನ್ನುತ್ತಾ ಅದಕ್ಕೆ 'ಮಳೆಯ ಹಾಡು' ಎಂದು ಕರೆದಿದ್ದಾರೆ ಎಂಬ ವಿಚಾರಗಳನ್ನು ಪ್ರಸ್ತಾಪಿಸುತ್ತಾರೆ.

'ಜನಪದ ಕವಿಗಳಲ್ಲಿ ಶಿವಪ್ರಜ್ಞೆ' ಲೇಖನದಲ್ಲಿ ಜಾನಪದರ ಜಾಗ್ರತ್ ಸ್ವಪ್ನ ಸುಷುಪ್ತ್ಯವಸ್ಥೆಗಳಲ್ಲೆಲ್ಲ ಬೇರುಬಿಟ್ಟು ಕೊಂಡಿದೆ ಶಿವಪ್ರಜ್ಞೆ ಎನ್ನುತ್ತಾರೆ. ಇದಕ್ಕೆ ಉದಾಹರಣೆಯಾಗಿ –

ಎದ್ದೂನೆ ನಿಮಗ್ಯಾನ ಏಳುತಲೆ ನಿಮಗ್ಯಾನ
ಸಿದ್ದರ ಗ್ಯಾನ ಶಿವಗ್ಯಾನ–ಮಾಶಿವನೆ
ನಿದ್ದೆಗಣ್ಣಾಗೆ ನಿಮಗ್ಯಾನ

ಈ ಪದ್ಯಕ್ಕೆ ಸಿ.ಪಿ.ಕೆ. ಅವರು ಕೊಡುವ ವಿವರಣೆ ತುಂಬಾ ಅರ್ಥಪೂರ್ಣವಾಗಿದೆ. 'ಎಚ್ಚರದ ಸ್ಥಿತಿಯಲ್ಲಿ ದೇವರನ್ನು ನೆನೆಯುವುದು ಕಷ್ಟವಲ್ಲ ; ಆದರೆ ನಿದ್ರಾವಸ್ಥೆಯಲ್ಲಿ ಶಿವಪ್ರಜ್ಞೆಯನ್ನು ಕಾಪಾಡಿಕೊಳ್ಳುವುದು ನಿಜಕ್ಕೂ ಅಸಾಧಾರಣವಾದುದು. ಏಕೆಂದರೆ, ಆಗ ಭವದ ಕಾಮನೆಗಳು ಭೂತಾಕಾರವಾಗಿ ರಿಂಗಣಗುಣಿಯುತ್ತಿರುತ್ತವೆ. ಇಂಥ ಅಸಾಧಾರಣವನ್ನು ನಿದ್ದೆಗಣ್ಣಿನಲ್ಲೂ ಶಿವನ ಜ್ಞಾನದಲ್ಲಿರುವುದನ್ನು ಸಾಧಿಸಿದ್ದಾರೆ, ಜಾನಪದ ಕವಿಗಳು. ನಾಗರಿಕರ ಸುಪ್ತಚಿತ್ತಕ್ಕೂ ಜಾನಪದರ ಸುಪ್ತಚಿತ್ತಕ್ಕೂ ಇರುವ ಅಗಾಧವಾದ ಅಂತರ ಇಲ್ಲಿ ವ್ಯಕ್ತವಾಗುತ್ತದೆ' ಎಂದು ಸ್ಪಷ್ಟವಾಗಿ ವಿವರಿಸುತ್ತಾರೆ.

ಶಿವತತ್ತ್ವ ಅನ್ನುವುದು ಯಾವೊಂದು ಪಂಗಡಕ್ಕೂ ಸೇರದೆ ಅತೀತವಾದುದು ಎಂಬ ಅಂಶವನ್ನು ಸಿ.ಪಿ.ಕೆ. ಅವರು ನಿದರ್ಶನ ಸಹಿತ ವಿವರಿಸಿದ್ದಾರೆ. ಜಾನಪದರು ಒಲಿದದ್ದು ಕುಲಸೀಮೆಯಿಲ್ಲದ ನಿಸ್ಸೀಮ ಪರವಸ್ತುವನ್ನು ; ಮರ್ತ್ಯದಲ್ಲಿ ವಿಹರಿಸಿದರೂ ಮಾನವರ ಅಳವಿಗೆ ನಿಲುಕದ ಪರಾಶಕ್ತಿಯನ್ನು ಎಂಬ ಅಂಶವನ್ನು ಸಾಂದರ್ಭಿಕ ಮಹತ್ವವನ್ನು ಈ ಲೇಖನದಲ್ಲಿ ಹಿಡಿದಿಟ್ಟಿದ್ದಾರೆ.

'ಜನಪದ ಕವಿಗಳಲ್ಲಿ ಮೃತ್ಯು ಮತ್ತು ಪ್ರಣಯ' ಲೇಖನದಲ್ಲಿ ಮೃತ್ಯುವಿಗೆ ಸಂಬಂಧಿಸಿದ ವಿಚಾರಗಳು ಹಾಗೂ ಪ್ರಣಯದ ವಿಚಾರಗಳನ್ನು ವಿವರಿಸಿದ್ದಾರೆ.

'ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಗ್ರಹ'ದ ಬಗ್ಗೆ ಮಾಹಿತಿಗಳನ್ನು ಇಲ್ಲಿ ನೀಡಿರುವುದು ಔಚಿತ್ಯಪೂರ್ಣವಾಗಿದೆ. ಸ್ವಾತಂತ್ರ್ಯೋತ್ತರ ಜನಪದ ಸಾಹಿತ್ಯ ಸಂಗ್ರಹಕಾರರಲ್ಲಿ ಎದ್ದುಕಾಣುವ ಎರಡು ಹೆಸರುಗಳಾದ ಬಿ. ಎಸ್. ಗದ್ದಿಗೀಮಠ ಮತ್ತು ಕ.ರಾ.ಕೃ. ಅವರ ಸ್ಥಾನವನ್ನು ಇಲ್ಲಿ ಸ್ಪಷ್ಟಪಡಿಸಿದ್ದಾರೆ. ಒಬ್ಬರ ಕಾರ್ಯಕ್ಷೇತ್ರ ಉತ್ತರ ಕರ್ನಾಟಕವಾದರೆ, ಮತ್ತೊಬ್ಬರದು ಹಳೆಯ ಮೈಸೂರು ಎಂಬುದನ್ನು ಗುರುತಿಸಿ ಅವರು ಮಾಡಿದ ಕೆಲಸವನ್ನು, ಅವರು ಸಂಗ್ರಹಿಸಿದ ಕೃತಿಗಳನ್ನು ವಿಶ್ಲೇಷಿಸಿದ್ದಾರೆ. ಕ. ರಾ. ಕೃ. ಅವರ ಸಂಗ್ರಹಗಳ ಬಗ್ಗೆ ಸಿ.ಪಿ.ಕೆ. ಅವರು ಬಯಲುಸೀಮೆ, ಮಲೆನಾಡು ಎರಡರಲ್ಲೂ ಸಂಚರಿಸಿ ಜನಪದ ಸಾಹಿತ್ಯ ಸಂಪತ್ತನ್ನು ನಮಗೆ ಕೊಟ್ಟಿದ್ದಾರೆ ಎನ್ನುತ್ತಾರೆ. ಕೇವಲ ಇವರಿಬ್ಬರಲ್ಲದೆ ಅನೇಕ ಮಂದಿ ಹಿರಿಯರ ಸಾಧನೆಯನ್ನು ಹೆಸರಿಸಿದ್ದಾರೆ. ಸಿ.ಪಿ.ಕೆ. ಅವರು ಜಾನಪದ ಸಂಶೋಧಕರಿಗೆ ಈ ಮಾತನ್ನು ಹೇಳುತ್ತಾರೆ: 'ಇದುವರೆಗಿನ ಅವಲೋಕನದಿಂದಲೆ ಸುವ್ಯಕ್ತವಾಗುವಂತೆ, 'ಕನ್ನಡದಲ್ಲಿ ಜಾನಪದ

ಸಾಹಿತ್ಯ ಸಂಗ್ರಹ ಕೇವಲ ಗೀತವಾಙ್ಮಯಕ್ಕಷ್ಟೆ ಸೀಮಿತವಾಗಿದೆ. ಕಥೆಗಳು, ಗಾದೆಗಳು, ಒಗಟುಗಳು ಮುಂತಾದ ಇತರ ಪ್ರಕಾರಗಳು ಇನ್ನೂ ಬಹಳಮಟ್ಟಿಗೆ ಅನಾಘ್ರಾತವಾಗಿ, ಅಸ್ಪರ್ಶಿಯಾಗಿ ಉಳಿದುಕೊಂಡಿವೆ. ಸಮೃದ್ಧವಾದ ಅವಕಾಶಗಳನ್ನಿಟ್ಟುಕೊಂಡು, ಸಂಶೋಧಕರ ಹಾದಿಕಾಯುತ್ತಾ ಕುಳಿತಿವೆ. ಇವುಗಳನ್ನು ವರಿಸುವ ಭಾಗ್ಯಕ್ಕಾಗಿ ಯಾರೂ ಅಷ್ಟಾಗಿ ಹಾತೊರೆಯುತ್ತಿಲ್ಲ. ಈ ಮಾತುಗಳು ಜಾನಪದದ ಕಾರ್ಯದ ಬಗ್ಗೆ ಸಂಶೋಧನಾತ್ಮಕವಾದ ಕೈಗೊಳ್ಳಬೇಕಾದ ವಿಚಾರಗಳಾಗಿವೆ.

'ಕೆಲವು ಜನಪದ ಗೀತಸಂಕಲನಗಳು' ಲೇಖನದಲ್ಲಿ ಜನಪದ ಗೀತೆಗಳಲ್ಲಿ ಕಾಣಬರುವ 'ಶ್ರೀ ಆದಿಚುಂಚನ ಗಿರಿ ಯ ಜನಪದ ಗೀತೆಗಳನ್ನು ಮಾದರಿಯಾಗಿಟ್ಟುಕೊಂಡು ಭಕ್ತಿಯ ಭಾವಗೀತೆಗಳಲ್ಲಿ ಸ್ಪಷ್ಟವಾಗಿ ಅಭಿವ್ಯಕ್ತವಾಗುವ ಮಧುರವಾದ ಭಾವಕಲ್ಪನೆಗಳು, ಪ್ರಾಸಾನುಪ್ರಾಸಗಳ ಮೋಡಿ, ಲಯದ ಬೆಡಗು, ಹೃದ್ಯವಾದ ಶೈಲಿ ಇವುಗಳನ್ನು ಬಗೆಯುವ ಕೆಲಸವನ್ನು ಸಿ.ಪಿ.ಕೆ. ಅವರು ಮಾಡಿದ್ದಾರೆ. ಜನಪದ ಕವಿಗಳು ಮುಕ್ತಕಗಳಲ್ಲಿ ತಮ್ಮ ಸುಖ-ದುಃಖಗಳನ್ನು, ಭಾವಾನುಭವಗಳನ್ನು ವ್ಯಕ್ತಗೊಳಿಸಿರುವಂತೆ, ತಮ್ಮ ಮನಸ್ಸಿನಲ್ಲಿ ಅಚ್ಚೊತ್ತಿದ್ದ ವ್ಯಕ್ತಿಯನ್ನೋ ಘಟನೆಯನ್ನೋ ಕುರಿತು ಕಥೆಕಟ್ಟಿ ಹಾಡಿರುವ ಅಂಶಗಳನ್ನು ನಿರೂಪಿಸಿದ್ದಾರೆ.

'ಜನಪದ ಸಾಹಿತ್ಯದ ಒಂದು ಗಡಿಕಲ್ಲು' ಎಂಬ ಲೇಖನದಲ್ಲಿ ಸಿ.ಪಿ.ಕೆ. ಅವರು 'ಜನಪದ ಸಾಹಿತ್ಯದ ಉಗಮ ಸಮಷ್ಟಿಪ್ರಜ್ಞೆಯಲ್ಲಿ, ಸಮಷ್ಟಿ ಮನೋಧರ್ಮದಲ್ಲಿ ಎಲ್ಲಿಯ ತನಕ ಸಮಷ್ಟಿ ಪ್ರಜ್ಞೆ ಜನಪದದಲ್ಲಿ ಪ್ರಧಾನವಾಗಿರುತ್ತದೋ ಅಲ್ಲಿಯ ತನಕ ಜನಪದ ಸಾಹಿತ್ಯ ಜೀವನದಿಯಾಗಿ ಹರಿದುಕೊಂಡು ಬಂತು ; ಆದರೆ

ಯಾವಾಗ ಸಮಷ್ಟಿಪ್ರಜ್ಞೆ ಅಪೋಹಗೊಂಡು ವ್ಯಷ್ಟಿಪ್ರಜ್ಞೆಗೆ ಪ್ರಾಧಾನ್ಯ ಸಂದಿತೋ ಆಗ ಜನಪದ ವಾಙ್ಮಯವಾಹಿನಿ ಬತ್ತಿಹೋಯಿತೆಂದೇ ಹೇಳಬಹುದು. ನಮ್ಮ ಜನತೆಯಲ್ಲಿ ವ್ಯಷ್ಟಿಪ್ರಜ್ಞೆಯನ್ನು ಅಂಕುರಗೊಳಿಸಿ ಬೆಳೆಯಿಸಿದ್ದು ಪಾಶ್ಚಾತ್ಯ ನಾಗರಿಕತೆಯ ಪ್ರಭಾವ ; ಬ್ರಿಟಿಷರ ಆಡಳಿತ ಈ ನಾಗರಿಕತೆಯನ್ನು ಜನಜೀವನಕ್ಕೆ ಪ್ರವೇಶಗೊಳಿಸಿ, ನಮ್ಮತನವನ್ನು ಅಳಿಸಿಹಾಕಿ ಪರಂಪರಾಗತವಾದ ಜನಪದ ಸಾಹಿತ್ಯಕ್ಕೆ ಮುಳುವಾಗಿ ಪರಿಣಮಿಸಿತು' ಎಂದಿದ್ದಾರೆ. ಈ ಮಾತುಗಳು ಗಮನಿಸಬೇಕಾದವುಗಳು. ಜನಪದ ಸಾಹಿತ್ಯದ ಮಹತ್ವದ ಕಡೆ ಹೇಗೆ ಒತ್ತುಕೊಡಬೇಕು ಎಂಬ ಅಂಶವನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ.

'ಬಾಂದಿನವರ ಹಾಡು' ಅರ್ಥವತ್ತಾದ ಗೀತೆಯನ್ನು ಸಿ.ಪಿ.ಕೆ. ಅವರು ಸಮರ್ಥವಾಗಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇದು ಜನಪದ ಸಾಹಿತ್ಯದ ಒಂದು ಗಡಿಕಲ್ಲು. ಆ ಸಾಹಿತ್ಯದ ಒಂದು ಚರಮಗೀತೆ. ಮೇಲುನೋಟಕ್ಕೆ ಈ ಗೀತೆ ಗ್ರಾಮೀಣರ ಅಜ್ಞಾನ ಮುಗ್ಧತೆಗಳನ್ನು ವ್ಯಕ್ತಪಡಿಸುವ ಒಂದು ವಿನೋದಕರ ಗೀತೆಯಾಗಿ ತೋರಿದರೂ ಅದು ಜನಜೀವನದಲ್ಲಿ ಘಟಿಸಿದ ಮಹಾಸಂಕ್ರಮಣದ ಸಾಹಿತ್ಯಕ ದಾಖಲೆ ಎನ್ನುತ್ತಾರೆ ಸಿ.ಪಿ.ಕೆ. ಅವರು. ಬಾಂದುಕಲ್ಲಿನಿಂದ ಜನಪದರು ಒಂದು ಕುಟುಂಬದಂತೆ ಬಾಳುವ ರೀತಿ, ಅವರಲ್ಲಿ ಸ್ವಾರ್ಥ, ಭೇದಭಾವ, ಕಲಹ, ಕಚ್ಚಾಟಗಳಿಗೆ ಅವರ ಮನೋಧರ್ಮದಲ್ಲಿ ಸ್ಥಾನವಿರಲಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿದ್ದಾರೆ.

'ಬಾಂದಿನವರ ಹಾಡು' ಪಾಶ್ಚಾತ್ಯ ನಾಗರಿಕತೆಯಿಂದುಂಟಾದ ಅನಾಹುತಗಳನ್ನು ಚಿತ್ರಿಸುವ ಬಗ್ಗೆ ವಸ್ತುತಃ ಎಲ್ಲ ಕ್ಷೇತ್ರಗಳಲ್ಲೂ ವ್ಯಕ್ತಿವ್ಯಕ್ತಿಯ ನಡುವೆ ಕಲ್ಲುಗಳು ನಿಂತುಕೊಂಡ ಬಗೆ, ಜೀವನಮೌಲ್ಯ ಬದಲಾದ ಬಗೆಗಳನ್ನು ಸಿ.ಪಿ.ಕೆ. ಅವರು ಬಹಳ ವಿಷಾದದಿಂದಲೇ

ವಿವರಿಸಿದ್ದಾರೆ.

ಒಟ್ಟಿನಲ್ಲಿ ಈ ಕೃತಿ ಪಾಂಡಿತ್ಯಪೂರ್ಣವಾಗಿ ಜನಪದ ಸಾಹಿತ್ಯದ ಸೌಂದರ್ಯಗಳನ್ನು ವಿಶ್ಲೇಷಿಸುವ ಮಹತ್ವದ ಕೃತಿಯಾಗಿದೆ.

'ಜಾನಪದ ಸರಸ್ವತಿ' ಸಿ.ಪಿ.ಕೆ. ಅವರ ಜನಪದ ಸಾಹಿತ್ಯ ವಿವೇಚನೆಯ ಮತ್ತೊಂದು ಕೃತಿ. ಜನಪದ ಸಾಹಿತ್ಯದ ಕೆಲವು ಮುಖಗಳ ಆನ್ವಯಿಕ ವಿಮರ್ಶೆ ಎಂದು ಅವರೆ ಕರೆದಿದ್ದಾರೆ. ಒಟ್ಟು ಹನ್ನೊಂದು ಭಾಗಗಳಿವೆ. ಜನಪದ ಸಾಹಿತ್ಯ : ಕೆಲವು ವಿಚಾರಗಳು, ಕೆಲವು ಜನಪದ ತ್ರಿಪದಿಗಳ ಸ್ವಾರಸ್ಯ, ಜನಪದ ಕವಿತೆಯ ಸೊಗಸು : ಕೆಲವು ನಿದರ್ಶನಗಳು, ಜನಪದ ಕಾವ್ಯದಲ್ಲಿ ಭಾವ–ನಾದಿನಿಯರ ಎರಡು ಪ್ರಸಂಗಗಳು, ಒಂದು ಅಪೂರ್ವ ಕಥನಗೀತೆ : 'ಗರತಿ ಗಂಗವ್ವ', 'ಕೆಲವು ಹಾಡುಗಳನ್ನು ಕುರಿತು', 'ಒಂದು ಜನಪದ ಪ್ರಾರ್ಥನೆ', 'ಜಾನಪದ ಸರಸ್ವತಿ ಎರಡು ಮುನ್ನುಡಿಗಳು', 'ಜನಪದ ಗೀತೆ : ಒಂದು ಪ್ರವೇಶ', 'ಭಾರತದ ಜನಪದ ಕಥೆಗಳು' – ಹೀಗೆ ಜನಪದರ ವಿವಿಧ ಮುಖಗಳನ್ನು, ಗುಣಗಳನ್ನು ಅನ್ವೇಷಿಸಿದ್ದಾರೆ. 'ಜನಪದ ಸಾಹಿತ್ಯವನ್ನು ಲಕ್ಷ್ಯದಲ್ಲಿರಿಸಿಕೊಂಡ ಕಾವ್ಯಮೀಮಾಂಸೆಯೊಂದರ ಅವಶ್ಯಕತೆಯಿದೆ. ಅಲಂಕಾರ, ರೀತಿ, ವಕ್ರೋಕ್ತಿ, ಸ್ವಭಾವೋಕ್ತಿ, ಧ್ವನಿ, ರಸ, ಪ್ರತಿಮೆ ಮುಂತಾದ ತತ್ತ್ವಗಳ ಬೆಳಕಿನಲ್ಲಿ ಜನಪದ ಕಾವ್ಯವನ್ನು ವ್ಯಾಖ್ಯಾನಿಸಬಹುದು ; ಅದಕ್ಕಿಂತ ಮಿಗಿಲಾಗಿ ಕೆಲವು ಮೂಲತತ್ತ್ವಗಳನ್ನು ಜನಪದ ಕಾವ್ಯಾನುಶೀಲನದಿಂದ ರೂಪಿಸುವ ಸಾಧ್ಯತೆಯಿದೆ. ಕಾವ್ಯನಿರ್ಮಿತಿ ಜಾಗೃತ ಮನಸ್ಸಿನ ಕ್ರಿಯೆಯೇ, ಸುಪ್ತ ಮನಸ್ಸಿನದೇ ಎಂಬುದು ಮನಶ್ಶಾಸ್ತ್ರ, ಕಾವ್ಯಮೀಮಾಂಸೆಗಳೆರಡಕ್ಕೂ ಸೇರಿದ ಚರ್ಚಾಸ್ಪದ ಪ್ರಶ್ನೆ. ಈ ಮೂಲಭೂತ ವಿಷಯದ ಮೇಲೆ ಜನಪದ ಕಾವ್ಯ ಪ್ರಾಯಃ ನಿರ್ಣಾಯಕವಾಗಿ ಬೆಳಕು ಚೆಲ್ಲಬಹುದು'

(ಜಾನಪದ ಸರಸ್ವತಿ–ಪುಟ 8). ಈ ರೀತಿಯಲ್ಲಿ ಸಿ.ಪಿ.ಕೆ. ಅವರು ರಸ, ಧ್ವನಿ ಮುಂತಾದ ಮೀಮಾಂಸಾ ದೃಷ್ಟಿಯಿಂದಲೂ ಮತ್ತು ವಿಮರ್ಶಾವಿಧಾನದಿಂದಲೂ ಜನಪದ ಕಾವ್ಯದ ಗುಣಾಂಶಗಳನ್ನು ಬೆಲೆಕಟ್ಟುವ ಪ್ರಯತ್ನ ಮಾಡಿದ್ದಾರೆ. ಜನಪದ ಸಾಹಿತ್ಯ ನಮ್ಮ ನಾಡಿನ ಐಕ್ಯದ ಸಂಕೇತವೆನ್ನುತ್ತಾರೆ. 'ರಾಜಕೀಯ ನಮ್ಮನ್ನು ಒಡೆಯುತ್ತದೆ, ಜಾತೀಯತೆ ನಮ್ಮನ್ನು ಒಡೆಯುತ್ತದೆ, ನಾಗರಿಕ ಬುದ್ಧಿವಂತರ ಬರವಣಿಗೆ ನಮ್ಮನ್ನು ಒಡೆಯುತ್ತದೆ : ಈ ಪ್ರಾಕೃತ ಪಾಮರ ಸಾಹಿತ್ಯವಾದರೂ ನಮ್ಮನ್ನು ಕೂಡಿಸಲಿ' ಎನ್ನುತ್ತಾರೆ. ಇಂಥ ಹಲವಾರು ಸೂಕ್ಷ್ಮಗಳನ್ನು ಜನಪದ ಸಾಹಿತ್ಯ ಹುದುಗಿಸಿಕೊಂಡಿದೆ. ಅವುಗಳಲ್ಲಿ ಇರುವ ವಿಚಾರಗಳನ್ನು ವಸ್ತುನಿಷ್ಠವಾಗಿ ಹೊರಗೆ ತೆಗೆಯುವ ಪ್ರಯತ್ನವನ್ನು, ಸಾಹಸವನ್ನು ಮಾಡಿದ್ದಾರೆ.

'ಕೆಲವು ಜನಪದ ತ್ರಿಪದಿಗಳ ಸ್ವಾರಸ್ಯ' ಪ್ರಬಂಧದಲ್ಲಿ ತ್ರಿಪದಿಗಳನ್ನು ಪ್ರಜ್ಞಾವಂತ ವಿಮರ್ಶಕನ ರೀತಿಯಲ್ಲಿ ಚರ್ಚಿಸಿದ್ದಾರೆ. ಒಂದು ನಿದರ್ಶನವಾಗಿ ನೋಡಬಹುದು. 'ಬಂಜೆ ಹೆಣ್ಣಿನ ಬದುಕಿನ ದಾರುಣತೆಯನ್ನು ಜನಪದ ಸಾಹಿತ್ಯದಲ್ಲಿ ನೋಡಬೇಕು. ಅಂಥವಳೊಬ್ಬಳು ತನ್ನ ಪಾಡನ್ನು ತೋಡಿಕೊಂಡಿರುವ ರೀತಿ ಹೃದಯವಿದ್ರಾವಕವಾದುದು.

ಹೆಣ್ಣು ಆಗೋದಕಿಂತ ಮಣ್ಣು ಆಗೋದು ಲೇಸು
ಮಣ್ಣಿನ ಮೇಲೆ ಮರವಾಗಿ– ಇದ್ದರೆ
ದಾರಿಕಾರರಿಗೆ ನೆರಳಾದೆ

ಬರಡೆಂದು ತೋರುವ ಮಣ್ಣಿನಲ್ಲಿ ಮರ ಹುಟ್ಟಿ ನೆರಳು ಕೊಡುತ್ತದೆ. ಆದರೆ ರಕ್ತಮಾಂಸಜೀವಗಳಿಂದ ಕುಡಿದ ತನ್ನ ಒಡಲಿನಲ್ಲಿ ಒಂದು ಮಗು ಹುಟ್ಟಲಿಲ್ಲವಲ್ಲ ಎಂಬ ಅಳಲು ಈ ಪದ್ಯದಲ್ಲಿ ಉತ್ಕಟವಾಗಿ

ವ್ಯಕ್ತವಾಗಿದೆ. ಅವಳು ಸಂತಾನವನ್ನು ಅಪೇಕ್ಷಿಸುವುದಾದರೂ ಸಮಾಜ ಹಿತಕ್ಕಾಗಿಯೇ ವಿನಾ ಕೇವಲ ಸ್ವಾರ್ಥಕ್ಕಾಗಿಯಲ್ಲ ಎಂಬುದು ಕೂಡ ಅವಳ ಮಾತಿನಲ್ಲಿ ಇಂಗಿತವಾಗಿದೆ'. ಹೀಗೆ ಒಂದು ತ್ರಿಪದಿಯನ್ನು ತೆಗೆದುಕೊಂಡರೆ ಬಹಳ ನಿಖರವಾಗಿ ಆಳವಾಗಿ ಹರಿತವಾದ ವಿಮರ್ಶಾನೆಲೆಯಲ್ಲಿ ಬರೆಯುತ್ತಾರೆ.

'ಜಾನಪದ ಕವಿತೆಯ ಸೊಗಸು : ಕೆಲವು ನಿದರ್ಶನಗಳು' ಪ್ರಬಂಧದಲ್ಲಿ ಜನಪದ ಕಾವ್ಯ ಮನೋಭೂಮಿಕೆಯನ್ನು, ಅದರ ಸುಪ್ತಚಿತ್ತದ ವ್ಯಾಪಾರಗಳನ್ನು ಪ್ರಾಯೋಗಿಕವಾಗಿ ಜನಪದ ಪದ್ಯಗಳ ಮುಖೇನ ವಿಶ್ಲೇಷಣೆಮಾಡಿದ್ದಾರೆ. 'ಭಗವಂತನನ್ನು ಜನಪದ ಕವಿಗಳು ಸಾಕ್ಷಾತ್ಕರಿಸಿಕೊಂಡ ರೀತಿಯನ್ನರುಹುವ ಈ ಒಂದು ಅಪೂರ್ವ ಪದ್ಯ ನಮ್ಮನ್ನು ವಿಸ್ಮಯ ರೋಮಾಂಚಿತರನ್ನಾಗಿ ಮಾಡುತ್ತದೆ :

ಹೂವಿನಾಗ ಹುದುಗ್ಯಾನ ಮಾಲ್ಯಾಗ ಮಲಗ್ಯಾನ
ಮೊಗ್ಗ್ಯಾಗ ಕಣ್ಣ ತೆರೆದಾನ –ಲಿಂಗಯನ
ನೋಡಟಗೆ ನಿದ್ದಿ ಬಯಲಾಗಿ

ಈ ಪದ್ಯಕ್ಕೆ ಸಿ.ಪಿ.ಕೆ. ಅವರು ಈ ರೀತಿಯಲ್ಲಿ ಈ ಪದ್ಯದ ಸೊಬಗನ್ನು ವಿಶ್ಲೇಷಿಸಿದ್ದಾರೆ. 'ನಮ್ಮ ಬದುಕಿನಲ್ಲಿ ಬೆರೆಯದ ಯಾವುದೋ ದೂರದ ವಸ್ತುವಿನಲ್ಲಿ ಅವರು ದೇವರನ್ನು ಕಾಣುವುದಿಲ್ಲ, ತಾವು ನಿತ್ಯ ಮುಡಿಯುವ ಹೂವಿನಲ್ಲೆ ಅವನನ್ನು ಕಾಣುತ್ತಾರೆ. ತನ್ಮೂಲಕ ಶಿವನನ್ನೆ ಮುಡಿದು, ಯೋಗ–ಭೋಗ ಸಮನ್ವಯವನ್ನು, ಶಿವ–ಸೌಂದರ್ಯ ಸಾಮರಸ್ಯವನ್ನು ಸಲೀಲವಾಗಿ ಸಾಧಿಸಿಬಿಡುತ್ತಾರೆ. ಈ ಶಿವಾನುಭವವಾದರು ಎಷ್ಟು ಪ್ರಾಮಾಣಿಕವಾಗಿ, ಸುಸಂಗತವಾಗಿ ಬಂದಿದೆಯೆಂಬುದನ್ನು ನೋಡಬೇಕು. ಲಿಂಗಯ್ಯ ಹೂವಿನಲ್ಲಿ ಹುದುಗಿದ್ದಾನೆ ; ಒಂದು ಹೂವಿನಷ್ಟು ಜಾಗದಲ್ಲಿ ಹುದುಗಿ

ಕುಳಿತುಕೊಳ್ಳುವುದು ಮಾತ್ರ ಸಾಧ್ಯ ; ಉದ್ದವಾದ ಹೂವಿನ ಮಾಲೆಯಲ್ಲಾದರೆ ಅವನು ಮೈಚಾಚಿ ಮಲಗಿದ್ದಾನೆ ; ಅದಕ್ಕೆ ಅಲ್ಲಿ ಸ್ಥಳಾವಕಾಶವಿದೆ ; ಇನ್ನು, ಮೊಗ್ಗು ಅರಳುವಾಗ ಜೊತೆಜೊತೆಯಲ್ಲಿ ಅವನು ಕಣ್ಣು ಬಿಡುತ್ತಾನೆ. ಎಲ್ಲ ಬುದ್ಧಿಗ್ರಾಹ್ಯವಾದ, ಸುಮೂರ್ತ ಚಿತ್ರಗಳು. ಜಾನಪದರು ದೇವರನ್ನು ಅಮೂರ್ತಶಕ್ತಿಯೆಂದು ಕಲ್ಪಿಸಿಕೊಳ್ಳುವುದೆ ಇಲ್ಲ; ಅವನೂ ತಮ್ಮಂತೆಯೇ ವ್ಯಕ್ತಿಯೆಂದು ಭಾವಿಸುತ್ತಾರೆ. ಈ ಪದ್ಯದಲ್ಲೂ ಅವನ ಸೂಕ್ಷ್ಮ ವ್ಯಕ್ತಿತ್ವ ಕಂಡರಣೆಗೊಂಡಿದೆ ; ಅವನು ಅದೃಶ್ಯನಿರಬಹುದು. ಆದರೆ ನಿರಾಕಾರನಲ್ಲ. ಇಲ್ಲಿನ ಸಂವೇದನೆ ಬುದ್ಧಿಯ ಹಂತದಲ್ಲೇ ನಿಂತುಬಿಡುವುದಿಲ್ಲ ; ಆಚೆಗೆ ಅಸೀಮವಾಗಿ ವಿಸ್ತರಿಸುತ್ತದೆ. ಹೂವಿನಲ್ಲಿರುವ ಶಿವನನ್ನು ಕಂಡು ಭವನಿದ್ರೆ ಬಯಲಾಗುವ, ಆತ್ಮ ಹಗಲಾಗುವ ಪರಿಯನ್ನು ನೋಡುತ್ತೇವೆ'. (ಜಾನಪದ ಸರಸ್ವತಿ ಪುಟ 26). ಹೀಗೆ ಸಿ.ಪಿ.ಕೆ. ಅವರು ತಾತ್ವಿಕವಾಗಿ ಜನಪದ ಕವಿತೆಗಳ ಸೊಗಸನ್ನು ಸಹಜವಾಗಿ ಶೋಧಿಸುವ ಕೆಲಸವನ್ನು ಮಾಡಿದ್ದಾರೆ. ಜನಪದ ಗೀತದ ಸಾಹಿತ್ಯಶಕ್ತಿ ಹಾಗೂ ಭಾವಸಂಪತ್ತನ್ನು ಎತ್ತಿ ತೋರಿಸಿದ್ದಾರೆ. ಬಹಳ ವಿದ್ವತ್ಪೂರ್ಣ ವಿಚಾರಗಳಿವೆ.

ಜನಪದ ಕಾವ್ಯದಲ್ಲಿ ಭಾವ-ನಾದನಿಯರ ಎರಡು ಪ್ರಸಂಗಗಳನ್ನು ಕುರಿತು ಚರ್ಚಿಸಿದ್ದಾರೆ. 'ಅಕ್ಕನ ಮನೆಯಲ್ಲಿ ತಂಗಿ' ಮತ್ತು 'ಭಾವ-ನಾದಿನಿಯರ ಸರಸ' ಇವರೆಡರಲ್ಲಿ ಕಾಣಬರುವ ಕೌಟುಂಬಿಕ ಚಿತ್ರಣವನ್ನು ತಂದಿದ್ದಾರೆ. ಇವರು ಕೊಡುವ ವಿವರಣೆ ಗಮನಸೆಳೆಯುತ್ತದೆ. ಒಂದು ಅಪೂರ್ವ ಕಥನ ಗೀತೆ : 'ಗರತಿ ಗಂಗವ್ವ' ಗೀತೆಯನ್ನು ಸಿ.ಪಿ.ಕೆ. ಅವರು ಸಾಮಾಜಿಕ ದೃಷ್ಟಿಯಿಂದ ಮಾತ್ರವಲ್ಲದೆ ಸಾಹಿತ್ಯದ ದೃಷ್ಟಿಯಿಂದಲೂ ವಿವೇಚಿಸಿದ್ದಾರೆ. 'ಇಡೀ

ಗೀತೆ ಗರತಿ ಗಂಗವ್ವನ ತ್ಯಾಗವೀರದ ಅನೂನಶಿಲ್ಪವಾಗಿದೆ. ಅವಳ ಸಮಾಜ ಹಿತಾಸಕ್ತಿ, ದೈವಭಕ್ತಿ, ಕೆಚ್ಚುನೆಚ್ಚುಗಳ ನಿಲುವು ಸುಲಭವಾಗಿ ನಮ್ಮ ಮನಸ್ಸನ್ನು ಸೆಳೆದುಕೊಳ್ಳುತ್ತದೆ. ಪ್ರಶಂಸಾಯೋಗ್ಯವಾಗುತ್ತದೆ. ಯಾವ ಬಾಹ್ಯಪ್ರಚೋದನೆ ಅಥವಾ ಒತ್ತಾಯವಿಲ್ಲದೆ ಅವಳು ಸ್ವೇಚ್ಛೆಯಿಂದ, ಸಂತೋಷ ಸಡಗರದಿಂದ ಕೈಗೊಂಡ ಆತ್ಮತ್ಯಾಗದ ನಿರ್ಣಯ ಬೆರುಗುಗೊಳಿಸುವಂಥದು. ಕವನದಲ್ಲಿ ಅನಗತ್ಯವಾದ, ಅನುಚಿತವಾದ ಯಾವ ಅಂಶವೂ ಸೇರಿಲ್ಲ. ಮೊದಲಿಂದ ಕಡೆತನಕ ಏಕಾಗ್ರತೆ ಎದ್ದು ಕಾಣುತ್ತದೆ. ಒಟ್ಟಿನಲ್ಲಿ ಗರತಿ ಗಂಗವ್ವನ ಉತ್ತುಂಗ ವ್ಯಕ್ತಿತ್ವದ ಸ್ಫುಟಚಿತ್ರವೊಂದನ್ನು ಗೀತೆ ನಮ್ಮ ಮನೋನೇತ್ರದ ಮುಂದೆ ಕಡೆದುನಿಲ್ಲಿಸುತ್ತದೆ. ಇದೇ ಅದರ ಗೆಲುವು' ಎಂಬುದಾಗಿ ಸಿ.ಪಿ.ಕೆ. ಅವರು ಅತ್ಯಂತ ಪರಿಣಾಮಕಾರಿಯಾಗಿ, ಶಕ್ತನಾಗಿ, ವ್ಯಕ್ತಪಡಿಸಿರುವುದು ಗಮನಾರ್ಹ ಅಂಶ.

'ಒಂದು ಜನಪದ ಪ್ರಾರ್ಥನೆ' ಎಂಬ ಪ್ರಬಂಧದಲ್ಲಿ ಅದರ ಸೌಂದರ್ಯ, ಸ್ವಾರಸ್ಯಗಳನ್ನು ಚಿತ್ರಿಸಿದ್ದಾರೆ. ಪ್ರಾರ್ಥನೆಯಲ್ಲಿ ಕಂಡು ಬರುವ ಸಮಷ್ಟಿಯ ಜೀವನ ಮೌಲ್ಯಗಳನ್ನು ಗುರುತಿಸಿದ್ದಾರೆ. 'ಜಾನಪದ ಸರಸ್ವತಿ' ಪುಸ್ತಕದ ಶೀರ್ಷಿಕೆಯೂ ಹೌದು. ವಿಶಿಷ್ಟವೂ ಮಹತ್ವಪೂರ್ಣವು ಆದ ಪ್ರಬಂಧವಾಗಿದೆ. 'ಸರಸ್ವತಿ'ಯ ಬಗ್ಗೆ ಬಂದಿರುವ ಮಾಹಿತಿಗಳನ್ನು ಔಚಿತ್ಯಪೂರ್ಣವಾಗಿ ಇಲ್ಲಿ ಹೇಳುತ್ತಾರೆ. ಸರಸ್ವತಿಯನ್ನು ಪ್ರೌಢಕವಿಗಳು ಕಂಡ ಪರಿಗೂ ಜನಪದ ಕವಿಗಳು ಕಂಡ ಪರಿಗೂ ವ್ಯತ್ಯಾಸವನ್ನು ಗುರುತಿಸಿ ಜಾನಪದ ಸರಸ್ವತಿಯ ಅರ್ಥಪೂರ್ಣ ಸ್ವರೂಪವನ್ನು ಇಲ್ಲಿ ವಿಶದಪಡಿಸಿದ್ದಾರೆ. 'ಜನಪದ ಕವಿಗಳಿಗೆ ಸರಸ್ವತಿ ಸಂಬಂಧವಿಲ್ಲದ, ದೂರಸ್ಥಿತಿ ದೇವತೆಲ್ಲ ; ಅವಳು ತಾಯಿ, ಅಕ್ಕ. ಅವಳಿರುವುದು ಗಂಗೆಯ ದಡದಲ್ಲಿ ; ಅವಳನ್ನು

ಭಕ್ತಿಗೌರವಪೂರ್ವಕವಾಗಿ ಕರೆದುತರಬೇಕು ;

ತಾಯಿಯ ನೆನದರೆ ಬೇಗನೆ ಪದ ಬರಲಿ
ತಾಯವ್ವೆ ಗಂಗೆ ದಡದಲ್ಲಿ –ಸರಸೋತಿ
ಕಾಯ ಕುಂಡ್ಹೋಗಿ ಕರೆತನ್ನಿ

'ಗಂಗೆ ದಡದಲ್ಲಿ' ಎಂಬ ಮಾತು ಸರಸ್ವತಿಯ ಪಾವಿತ್ರ್ಯವನ್ನೂ ಅವಳ ಅನುಗ್ರಹದಿಂದೊಗುವ ಒದಗಬೇಕಾದ ಉನ್ನತ ಪ್ರಯೋಜನಗಳನ್ನೂ ಧ್ವನಿಸುತ್ತದೆ. ಹೀಗೆ ಸಿ.ಪಿ.ಕೆ. ಅವರು 'ಸರಸ್ವತಿ' ಚಿತ್ರಗಳನ್ನು ಜಾನಪದ ಕವಿಗಳು ಕಂಡಿರುವ ರೀತಿಯನ್ನು ಪ್ರಸ್ತುತಪಡಿಸುತ್ತಾರೆ. ಸರಸ್ವತಿಗಾಗಿ ಜಾನಪದ ಕವಿಗಳು ಹುಡುಕಿ ತೊಳಲಿ ಬಳಲಿರುವ ಬಗ್ಗೆಯನ್ನು ಹಲವಾರು ಜನಪದ ತ್ರಿಪದಿಗಳ ಮೂಲಕ ವಿಶ್ಲೇಷಿಸಿದ್ದಾರೆ.

'ಜಾನಪದ ಸಮೀಕ್ಷೆ' ಮತ್ತು 'ಜನಪದ ಸಂಸ್ಕೃತಿ' ಈ ಎರಡು ಪುಸ್ತಕಗಳಿಗೆ ವಿದ್ವತ್ಪೂರ್ಣ ಮುನ್ನುಡಿಯನ್ನು ಬರೆದಿದ್ದಾರೆ. ಭಾರತದ ಜನಪದ ಕಥೆಗಳನ್ನು ವಿಶ್ಲೇಷಿಸಿದ್ದಾರೆ. ಈ ಎಲ್ಲ ಪ್ರಬಂಧಗಳು ಹೆಚ್ಚಿನ ಪ್ರಾಶಸ್ತ್ಯವನ್ನು ಬೆಳೆಸಿಕೊಂಡು ಸಮರ್ಥ ವಿಶ್ಲೇಷಣೆ ವಿವರಣೆಗಳಿಗೆ ಗುರಿಪಡಿಸಿ ಮೌಲ್ಯಗಳನ್ನು ಹುಡುಕುವ ಪರಿ ಓದುಗರಿಗೆ ಬೆರಗನ್ನುಂಟುಮಾಡುತ್ತದೆ.

'ಜಾನಪದ ಜಾಗರ' ಸಿ.ಪಿ.ಕೆ. ಅವರು ಜಾನಪದದ, ಅದರಲ್ಲೂ ಜನಪದ ಸಾಹಿತ್ಯದ ಹಲವು ಮಗ್ಗುಲುಗಳನ್ನು ವಿಶ್ಲೇಷಣೆಗೆ, ವಿವರಣೆಗೆ ಒಳಪಡಿಸಿ ಒಂದು ಹೊಸ ವ್ಯಾಖ್ಯಾನವನ್ನು ನೀಡಿರುವ ಕೃತಿಯಾಗಿದೆ. ಇಲ್ಲಿ ಒಟ್ಟು ಹದಿನೈದು ಪ್ರಬಂಧಗಳಿವೆ. ಗಾದೆ, ಒಗಟು ಮತ್ತು ಒಡಪು, ವೃತ್ತಿ ಜಾನಪದ, ಜನಪದ ಗೀತೆಗಳಲ್ಲಿ ಶಿವ, ಜನಪದ

ಶೃಂಗಾರ, ಜನಪದ ಹಾಸ್ಯ, ಜನಪದ ಗೀತೆಗಳಲ್ಲಿ ಸಂಸ್ಕೃತಿ, ಜನಪದ ಗೀತೆಗಳಲ್ಲಿನ ಮಕ್ಕಳ ಚಿತ್ರಗಳು, 'ಕಂದನಕೊಡು ಶಿವನೆ ಬಂಧನ ಪಡಲಾರೆ', 'ಹೆಣ್ಣು ಸಾಕೆಂದ ಜನುಮಕೆ', 'ಒಂದು ಜನಪದ ಕಥನಗೀತೆ', 'ಒಂದು ಜನಪದ ಪಳಯುಳಿಕೆ', 'ಉತ್ತರ ದೇವಿಯ ಹಾಡು' : ಒಂದು ಟಿಪ್ಪಣಿ, 'ಚೆಲುವಯ್ಯ ವರನಂದಿ', 'ಮೂರು ಮುನ್ನುಡಿಗಳು', 'ಗೊಂಡ ಪ್ರೇಮಗೀತೆಗಳನ್ನು ಕುರಿತು' ಇವೆ ಅದರಲ್ಲಿನ ಪ್ರಬಂಧಗಳಾಗಿವೆ. ಸಿ.ಪಿ.ಕೆ. ಅವರು ಪಾಶ್ಚಾತ್ಯ ಮತ್ತು ಭಾರತೀಯ ಜೀವನ ವಿಧಾನವನ್ನು ಅರ್ಥಮಾಡಿಕೊಂಡು ಗಂಭೀರವಾದ ಚಿಂತನೆಯನ್ನು ಮಾಡಿದ್ದಾರೆ. ಜನಪದ ಸಾಹಿತ್ಯ ಮತ್ತು ಅದರ ಮುಖಗಳನ್ನು ವಿಶ್ಲೇಷಿಸುವಾಗ ಜನಪದ ಸಂಸ್ಕೃತಿಯ ಸಂಪನ್ನತೆಯನ್ನು ವ್ಯಾಖ್ಯಾನಿಸುವ ರೀತಿ ಮಾತ್ರ ವೈಜ್ಞಾನಿಕವಾದುದಾಗಿದೆ. ಇವರ ಬರವಣಿಗೆಯಲ್ಲಿ ಪಾಂಡಿತ್ಯಕ್ಕಿಂತ ನಮ್ರತೆ ಇರುವುದರಿಂದ ಜನಪದರ ಮುಕ್ತ ಬದುಕಿನ ವೈವಿಧ್ಯ ಜೀವನದ ಅಂಶಗಳು ನಮಗೆ ಸುಂದರವಾಗಿ ತಿಳಿಯುತ್ತವೆ. ಸಿ.ಪಿ.ಕೆ. ಅವರೆ 'ಆದರೆ ಸಾಂಸ್ಕೃತಿಕ ದೃಷ್ಟಿಯ ಪ್ರತಿಪಾದಕರು ಜನಪದ ವಾಙ್ಮಯದ ಸಾಹಿತ್ಯಕ ಮೌಲ್ಯವನ್ನು ಅಲ್ಲಗೆಳೆಯುವ ಅಥವಾ ಕಡೆಗಣಿಸುವ ಮತ್ತು ಅಂಥ ಮೌಲ್ಯಗಳನ್ನು ಎತ್ತಿ ಹಿಡಿಯುವವರ ಪ್ರಯತ್ನಗಳನ್ನು ತಾತ್ಸಾರದಿಂದ ಕಾಣುವ ಪ್ರವೃತ್ತಿಯನ್ನು ತೋರಿಸುತ್ತಿರುವುದು ವಿಷಾದಕರವೆನ್ನಬೇಕು' ಎಂದು ಜಾನಪದ ಜಾಗರ ಕೃತಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಈ ಕೃತಿಯ ಬರಹಗಳನ್ನು ಓದುತ್ತಾ ಹೋದಂತೆ ಸಿ.ಪಿ.ಕೆ. ಅನುಭವದ್ರವ್ಯ ಸಮರ್ಥ ಸೃಜನಶೀಲ ಲೇಖಕ ಎಂಬುದಕ್ಕೆ ಸಾಕ್ಷಿಪ್ರಜ್ಞೆಯಾಗಿದೆ.

ಜಾನಪದ, ಜನಪದ ಸಾಹಿತ್ಯದ ಬಗ್ಗೆ ಸಿ.ಪಿ.ಕೆ. ಅವರು ಹಲವು ಮಹತ್ವದ ವಿಷಯಗಳನ್ನು ವಿವರಿಸಿದ್ದಾರೆ. ಹಲವಾರು ಸಮಸ್ಯೆಗಳನ್ನು

ಎತ್ತಿಕೊಂಡು ಉತ್ತರ ನೀಡಿದ್ದಾರೆ. ಅವರೆ ಒಂದೆಡೆ ಹೀಗೆ ಹೇಳುತ್ತಾರೆ. 'ಜಾನಪದ ವಿರಾಟ್ ಸ್ವರೂಪಿ ; ಅದರ ವ್ಯಾಪ್ತಿಯಲ್ಲಿ ಬರದ ವಿಷಯಗಳು ಕಡಿಮೆ' ಎಂದು. ಈ ಎಲ್ಲ ಅಂಶಗಳನ್ನು ಚರ್ಚಿಸುತ್ತಲೆ ಜನಪದ ಸಾಹಿತ್ಯ ಮತ್ತು ಅದರ ಪ್ರಕಾರಗಳ ಬಗ್ಗೆ ಗಮನಹರಿಸಿದ್ದಾರೆ. ಡಾ॥ ಹಿ. ಶಿ. ರಾ. ಅವರು ಸಿ.ಪಿ.ಕೆ. ಅವರು ಜಾನಪದ ಅಧ್ಯಯನದ ನೆಲೆಗಳನ್ನು ಈ ಕೆಲಗಿನ ರೀತಿ ಗುರುತಿಸಲು ಪ್ರಯತ್ನ ಮಾಡಿದ್ದಾರೆ. ನಾಲ್ಕು ಬಗೆಯಲ್ಲಿ ಚಿಂತನೆ ನಡೆದಿರುವುದನ್ನು ಅವರು ಗುರುತಿಸಿದ್ದಾರೆ.

1) ಹೋಲಿಸುವುದು – ಸಾದೃಶ್ಯ – ವೈದೃಶ್ಯಗಳೊಡನೆ
2) ವಿವರಿಸುವುದು – ಅರ್ಥ – ಉದ್ದೇಶಗಳೊಡನೆ
3) ಸ್ಪಷ್ಟೀಕರಿಸುವುದು – ಮನನ – ಅನುಭವಗಳೊಡನೆ
4) ಆಸ್ವಾದಿಸುವುದು – ಪ್ರೀತಿ – ಮಮತೆಗಳೊಡನೆ.

ಬರೆಯುವಲ್ಲಿಯೇ ಆಸ್ವಾದನೆಗೂ ತೊಡಗುವ ಕ್ರಿಯೆಯಿಂದಾಗಿ ಕೆಲವೊಮ್ಮೆ ವಿಶ್ಲೇಷಣೆಗೆ ಪರಿಮಿತಿ ಬರುವುದಾದರೂ ಅರಸುವ ಅರ್ಥ, ಬೆರಸುವ ಪಾಂಡಿತ್ಯದ ಪರಿ ಸದುದ್ದೇಶದಿಂದ ಕೂಡಿದ್ದು. ಪಾಶ್ಚಾತ್ಯ ಪಂಡಿತರ ಹೇಳಿಕೆಗಳನ್ನು ಹಣೆಯಲ್ಲಿ ಬರೆದುಕೊಂಡು ಜನಪದ ಸಾಹಿತ್ಯ ವಿಮರ್ಶೆ ನಡೆಸದೆ ತಮ್ಮ ಜನಪದ ಜೀವನ ಅನುಭವ ಮತ್ತು ವಿದ್ವತ್ತಿನ ಸೌಜನ್ಯದೊಡನೆ ವಿವೇಚನೆಗೆ ತೊಡಗುತ್ತಾರೆ. ಜನಪದ ಸಾಹಿತ್ಯ ವಿಮರ್ಶೆಗೆ ಹೊರಡುವ ಮುನ್ನ ಗಮನಿಸಬೇಕಾದ ಹಲವು ಅಂಶಗಳ ಕಡೆಗೆ ಶ್ರದ್ಧೆ ಹರಿಸುತ್ತಾರೆ' ಎನ್ನುತ್ತಾರೆ. ಸಿ.ಪಿ.ಕೆ. ಅವರು ಜನಪದ ಸಾಹಿತ್ಯದ ಪ್ರಾದೇಶಿಕತೆಯನ್ನು ಪ್ರಾಂತ್ಯದ ಜನಜೀವನವನ್ನು ಪ್ರಕೃತಿಯ ಹಿನ್ನೆಲೆಯಲ್ಲಿಯೂ ವಿವರಿಸಿದ್ದಾರೆ. ಸಿ.ಪಿ.ಕೆ. ಅವರು ಜನಪದ ಸಾಹಿತ್ಯದಲ್ಲಿ ಮುಖ್ಯವಾಗಿ ಪ್ರಾದೇಶಿಕ ಅಂಶಗಳನ್ನು ಸ್ಪಷ್ಟವಾಗಿ ಗುರುತಿಸಿದ್ದಾರೆ. ಜನಪದ

ಸಾಹಿತ್ಯ, ಶಾಸನ ಸಾಹಿತ್ಯ, ವಚನ ಸಾಹಿತ್ಯದ ಸಂಬಂಧಗಳನ್ನು ತಿಳಿಸುತ್ತಾ ಅಭಿವ್ಯಕ್ತಿಯಲ್ಲಿ ಜನಪದ ಭಾಷೆ ಮತ್ತು ಜನಜೀವನವನ್ನು ಪುನರ್ ಸೃಷ್ಟಿಸುವ ಪ್ರತಿಭೆಗಳೆಂದು ತಿಳಿಸುತ್ತಾರೆ. ಮಹಾಕಾವ್ಯದ ಪ್ರಜ್ಞಾಪೂರ್ವಕ ಬೌದ್ಧಿಕ ಕಾರ್ಯಕ್ಕೆ ಜನಪದ ಕಾವ್ಯ ತೊಡಗಲಿಲ್ಲವಾದ ಕಾರಣ ಅದು ನಿರಂತರವಾಗಿ ಉಳಿಯುವ ಹಕ್ಕನ್ನೂ ಕಾಯ್ದುಕೊಂಡು ಬಂದ ಬಗೆಯನ್ನು ನಿಖರವಾಗಿ ಸ್ಪಷ್ಟಪಡಿಸುತ್ತಾರೆ. ಹೀಗೆ ಸಿ.ಪಿ.ಕೆ. ಅವರ ಜಾನಪದ ಜಾಗರ, ಜನಪದ ಸಾಹಿತ್ಯ ಪ್ರವೇಶಿಕೆ, ಜನಪದ ಗೀತೆ ಇವೆಲ್ಲ ಜಾನಪದ ಜನಪದ ಸಾಹಿತ್ಯದ ಬಗ್ಗೆ ತಾತ್ವಿಕವಾದ ಚಿಂತನೆಯನ್ನು ನಡೆಸಿದ್ದಾರೆ.

ಈ ಎಲ್ಲಾ ಕೃತಿಗಳಲ್ಲಿ ಜನಪದ ಸಾಹಿತ್ಯದ ಮುಖ್ಯ ಪ್ರಕಾರಗಳಾದ ಗೀತೆ, ಕಥನಗೀತೆ, ಗಾದೆ, ಒಗಟು, ಜನಪದ ಹಾಡು, ಶೃಂಗಾರ, ಶಿವ, ಸರಸ್ವತಿ, ಕಥೆಗಳ ಬಗ್ಗೆ ಸೂಕ್ಷ್ಮವಾಗಿ, ಸರಳವಾಗಿ ಮನಮುಟ್ಟುವಂತೆ ಪರಿಶೀಲನೆ ಮಾಡಿದ್ದಾರೆ. 'ಜನಪದ ಸಾಹಿತ್ಯದ ಮೂಲ ನಿಯಮಗಳನ್ನು ಮೊದಲಾಗಿ ತಿಳಿಯುವವರು ಇವುಗಳನ್ನು ಆಶ್ರಯಿಸುವುದು ಸೂಕ್ತ. ದಾರಿ ತಪ್ಪಿಸದೆ, ಗೊಂದಲಗೊಳಿಸದೆ, ವಿದ್ವತ್ತಿನ ದಂಡಕಾರಣ್ಯದಲ್ಲಿ ಅಲೆಸಿ ನೀರುನೆರಳಿಲ್ಲದೆ ಕಂಗೆಡಿಸದೆ ಪ್ರಾಥಮಿಕವಾಗಿ ತಿಳಿಯಬೇಕಾದುದನ್ನು ಪ್ರಥಮ ಪರಿಶೀಲನೆಯಲ್ಲಿ ಓದುನಿಷ್ಠವಾಗಿ ತಿಳಿಸುತ್ತದೆ. ಶ್ರೀ ಸಿ.ಪಿ.ಕೆ. ಅವರು ಜನಪದ ಜೀವನವನ್ನು ಕಂಡುಂಡವರೂ ಆದ್ದರಿಂದ ಅವರ ಈ ತತ್ವ ಚಿಂತನೆಗೆ ಲವಲವಿಕೆಯ ಸ್ಪರ್ಶವೂ ಇದೆ (ಪ್ರೊ.ಹಿ.ಶಿ.ರಾ.). ಸಿ.ಪಿ.ಕೆ. ಅವರು ಗಾದೆಗಳ ಬಗ್ಗೆ ತಿಳಿಸುತ್ತಾ 'ಗಾದೆಗಳು ಆಯಾ ಜನಾಂಗಕ್ಕೆ ಜೀವನಕಲೆಯನ್ನು ಕಲಿಸುವ ತರಬೇತಿ ಶಾಲೆಗಳು, ಶಿಕ್ಷಣಾಲಯಗಳು, ತೀರ್ಪುಕೊಡುವ ನ್ಯಾಯಾಲಯಗಳು ಹೌದು' ಎನ್ನುತ್ತಾರೆ.

ಅನಂತರ ಒಗಟುಗಳ ಅಂತರಂಗ – ಬಹಿರಂಗ – ವಿಷಪ್ರಜ್ಞೆ – ತಿಳುವಳಿಕೆ ಮತ್ತು ಹಾಸ್ಯದ ಉದ್ದೇಶಗಳನ್ನು ಸ್ಪಷ್ಟಪಡಿಸಿದ್ದಾರೆ. ಒಗಟುಗಳಲ್ಲಿ ಕಂಡಬರುವ ಬುದ್ಧಿತೀಕ್ಷ್ಣತೆ, ಬುದ್ಧಿಭಾವಗಳ ವಿದ್ಯುದಾಲಿಂಗನ, ಜಾಗೃತಿಗಳಂಥ ಗುಣಸಂಯೋಜನಗಳ ಬಗ್ಗೆ ತಿಳಿಸುವುದಲ್ಲದೆ ಒಗಟು ಪದದ ಅರ್ಥ, ಅದರ ವಿವಿಧ ಮುಖಗಳನ್ನೆಲ್ಲ ಸಾರವತ್ತಾಗಿ ಸ್ಪಷ್ಟಪಡಿಸಿದ್ದಾರೆ.

ಬದುಕಿನ ಒಂದು ಮುಖ್ಯವಾದ ಮೂಲಭೂತವಾದ ಗಂಡು–ಹೆಣ್ಣಿನ ಒಲವು ಜನಪದ ಗೀತೆಗಳಲ್ಲಿ ಹೇಗೆ ಬಿಂಬಿಸಿದೆ ಎಂಬುದನ್ನು 'ಜನಪದ ಶೃಂಗಾರ' ಪ್ರಬಂಧದಲ್ಲಿ ಹಲವಾರು ನಿದರ್ಶನಗಳೊಡನೆ ಪರಿಶೀಲಿಸಿದ್ದಾರೆ.

ಈ ಕೃತಿಯಲ್ಲಿ ಜನಪದ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಿಸಿದ ಬರಹಗಳ ಜೊತೆಯಲ್ಲೇ ಆ ಕಾಲಕ್ಕೆ ಹೊಸದಾಗಿದ್ದ 'ವೃತ್ತಿ ಜಾನಪದ', 'ಜನಪದ ಗೀತೆಗಳಲ್ಲಿ ಸಂಸ್ಕೃತಿ' ಹೀಗೆ ಹಲವಾರು ವಿಷಯಗಳ ಪ್ರಸ್ತಾಪವನ್ನುಮಾಡಿದ್ದಾರೆ. ಶೃಂಗಾರ, ಹಾಸ್ಯ, ಮಕ್ಕಳಚಿತ್ರ, ಗಾದೆ, ಒಗಟು, ಒಡಪು, ಕಥನಗೀತೆ ಮುಂತಾದ ವಿಷಯಗಳ ಬಗ್ಗೆ ಮೌಖಿಕ ಚರ್ಚೆಯನ್ನು ಸಿ.ಪಿ.ಕೆ. ಅವರು ನಡೆಸಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಿಕ ಪ್ರೇಮಗೀತೆಗಳನ್ನು ಮೂರು ವರ್ಗ ಮಾಡಿಕೊಂಡು ಚರ್ಚಿಸಿದ್ದಾರೆ. (1) ದಾಂಪತ್ಯದ ಚೌಕಟ್ಟಿನೊಳಗೆ ಬರುವ ಶೃಂಗಾರ ಚಿತ್ರಗಳನ್ನುಳ್ಳವು (2) ದಾಂಪತ್ಯ ಬಾಹಿರ ನಿಷಿದ್ಧಿ ಪ್ರಣಯ ಚಿತ್ರಗಳನ್ನುಳ್ಳವು (3) ವಿವಾಹಪೂರ್ವ ಪ್ರಣಯ ಚಿತ್ರಗಳನ್ನುಳ್ಳವು. ಹೀಗೆ ಗೀತಸಮುದಾಯದಲ್ಲಿ ಗಂಡು ಹೆಣ್ಣಿನ ಸಂಬಂಧದ ಹಲವು ಮಗ್ಗುಲುಗಳ ಅರ್ಥಪೂರ್ಣ ಆವಿಷ್ಕಾರವನ್ನು ವಿವರಿಸಿದವರು ಕನ್ನಡ ಸಾಹಿತ್ಯದಲ್ಲಿ ಅಪರೂಪದವರು ಎಂದರೆ

ಅತಿಶಯೋಕ್ತಿಯಾಗಲಾರದು.

ನಿದರ್ಶನಕ್ಕೆ ಮಧುರ ದಾಂಪತ್ಯ ಚಿತ್ರಣವನ್ನು ಅವರು ವಿವೇಚನೆ ಮಾಡುವ ಬಗೆಯನ್ನು ಇಲ್ಲಿ ದಾಖಲಿಸುವುದು ಸೂಕ್ತವೆನಿಸುತ್ತದೆ. 'ಗಂಡು-ಹೆಣ್ಣುಗಳಿಗೆ ವಿವಾಹ ಬಂಧನ ಅಪೇಕ್ಷಣೀಯ : ಹೆಣ್ಣಿಗೆ ಗಂಡು ಹೇಗೆ ರಕ್ಷೆಯೋ ಹಾಗೆ ಗಂಡಿಗೆ ಹೆಣ್ಣು ರಕ್ಷೆ ; ಇಬ್ಬರಿಂದಲೂ ಸಮಾಜಕ್ಕೆ ಹಿತ, ಭದ್ರತೆ. ಗಂಡೊಬ್ಬ ತನ್ನ ಮಡದಿಗೆ ಹೇಳುವ ಈ ಮಾತುಗಳು ವಿಶಿಷ್ಟ :

ನಾನೇ ಒಂದು ಕದವಾಗಿ
ನೀನೇ ಒಂದು ಬೀಗವಾಗಿ
ಚೆಂದುಳ್ಳಿ ಚೆಲುವೆ । ಕದವಿಲ್ದ ಮನೆಯದು
ಹದಗೆಟ್ಟು ಹೋಗುವುದು.

ಬಾಗಿಲು-ಬೀಗಗಳ ಅವಿನಾಭಾವ ಸಂಬಂಧ, ಅಂತೆಯೆ ಎರಡೂ ಸೇರಿ ಮನೆಗೆ ಕೊಡುವ ರಕ್ಷಣೆ ಇಲ್ಲಿ ಚೆನ್ನಾಗಿ ಧ್ವನಿತವಾಗುತ್ತದೆ. ಇದು ವೈಚಾರಿಕ ಸ್ತರದಲ್ಲಿ ಮೂಡಿದ ನುಡಿ : ಬರಿಯ ಭಾವಸ್ತರದ್ದಲ್ಲ. ತನ್ನ ಮನದನ್ನೆ ತುಸು ಕಪ್ಪಗಿದ್ದರೂ ಗಂಡಿಗೆ ಅದು ಒಪ್ಪೇ ; ಆಸ್ವಾದಕ್ಕೆ ಅದರಿಂದ ಯಾವ ಅಡ್ಡಿಯೂ ಇಲ್ಲ'.

'ಜನಪದ ಗೀತೆಗಳಲ್ಲಿ ಸಂಸ್ಕೃತಿ'ಯನ್ನು ಸಾಹಿತ್ಯಕ ನೆಲೆಯಲ್ಲಿ ಅರ್ಥೈಸಿದ್ದಾರೆ. ಯಾವುದೇ ಜನಾಂಗದ ಸಂಸ್ಕೃತಿಯನ್ನು ಅರಿಯಬೇಕಾದರೆ ಅಲ್ಲಿಯ ಸಾಹಿತ್ಯವನ್ನು ಗಮನಿಸಬೇಕು ಎಂಬ ಸಲಹೆಯನ್ನು ನೀಡುತ್ತಾರೆ. ಜನತೆಯ ಅಂತರಂಗ ಜೀವನ ಸಾಹಿತ್ಯದಲ್ಲಿ ಬಿಂಬಿತವಾಗಿರುತ್ತದೆ ಎನ್ನುತ್ತಾರೆ. ಭಾರತೀಯ ಸಂಸ್ಕೃತಿಗೆ ಧರ್ಮವೇ ತಳಹದಿ ಎಂಬ ಅಂಶವನ್ನು ಹಲವಾರು ನೆಲೆಗಳಲ್ಲಿ ವಿಶ್ಲೇಷಿಸಿದ್ದಾರೆ.

ಗೊಂಡ ಪ್ರೇಮಗೀತೆಗಳನ್ನು ಕುರಿತು ಪರಿಚಯಿಸುವ ರೀತಿ

ಮೋಹಕವಾಗಿದೆ. ಗೊಂಡ ಜನಪದ ಕಾವ್ಯದ ಒಂದು ಮುಖ್ಯವಾದ ಅಂಗ ಪ್ರೇಮಗೀತೆಗಳಾಗಿವೆ ಎಂಬ ಅಂಶವನ್ನು ತಿಳಿಸುತ್ತಾರೆ. ಅಲ್ಲಿ ಕಂಡುಬರುವ ಪ್ರೇಮದ ಗಾಢತೆ, ಪ್ರೇಮದ ವೇದನೆಯನ್ನು ಸಿ.ಪಿ.ಕೆ. ಅವರು ಗಾಢವಾದ ಒಳನೋಟದಿಂದ ಬಣ್ಣಿಸಿದ್ದಾರೆ. ನಿದರ್ಶನಕ್ಕೆ ಕೆಲವು ವಾಕ್ಯಗಳನ್ನು ಗಮನಿಸಬಹುದು.

'ಗೊಂಡ ಗಂಡಸರ ಪಾಲಿಗೆ', 'ಹುಡುಗಿಯಿಲ್ಲದೆ ಬದುಕು ವ್ಯರ್ಥ', 'ಗಂಡಸು ಒಂದು ಹೆಣ್ಣಿಲ್ಲದೆ ಮಲಗಲಾರ', 'ಹೊರಗೆ ದೀಪಗಳು ಉರಿಯಬಹುದು : ಆದರೆ 'ಹುಡುಗಿಯಿಲ್ಲದೆ ಒಳಗೆಲ್ಲ ಕತ್ತಲು'. ಗೊಂಡರು ಹೇಳುತ್ತಾರೆ:

ದೇವರ ಇರುಳನ್ನು ಖಾಲಿ ಕುಣಿತ ಹಾಡುಗಳಲ್ಲಿ ನಾವು ಹೇಗೆ ಕಳೆಯಬಲ್ಲೆವು ?

ತಿನ್ನುವುದು, ಕುಡಿಯುವುದು, ಕುಣಿತ, ಹಾಡು ಎಲ್ಲ ಗೌಣ. ದೇವರು ಕೊಟ್ಟ ಇರುಳು ಸಾರ್ಥಕವಾಗುವುದು ದೈಹಿಕ ಮಿಲನದಿಂದ'. ಹೀಗೆ ಪ್ರಿಯಕರ, ಪ್ರೇಯಸಿಯ ನುಡಿಗಳನ್ನು ಗೊಂಡ ಪ್ರೇಮಕಾವ್ಯವನ್ನು ನಮ್ಮನ್ನು ಬೆರಗುಗೊಳಿಸುವಂತೆ ಸಿ.ಪಿ.ಕೆ. ಅವರು ಚಿತ್ರಿಸಿದ್ದಾರೆ.

'ಜನಪದ ಸಾಹಿತ್ಯ ಪ್ರವೇಶಿಕೆ' ಚಿಕ್ಕ ಕೃತಿಯಾದರೂ ಬಹಳ ಮೌಲಿಕವಾದ ಕೃತಿಯಾಗಿದೆ. ಕೃತಿಯ ಪ್ರಾರಂಭದಲ್ಲಿ ಬರುವ ಪೀಠಿಕೆಯ ಭಾಗ ವಿದ್ವತ್ಪೂರ್ಣತೆಯಿಂದ ಕೂಡಿದೆ. ಗೀತೆ, ಕಥನಗೀತೆ, ಲಾವಣಿ, ಗಾದೆ, ಒಗಟು, ಕಥೆ ಕುರಿತಂತೆ ಆಳವಾದ ಚಿಂತನೆಯನ್ನು ನಡೆಸಿದ್ದಾರೆ. ಜಾನಪದ ಎಂದರೇನು ? ವಿವರಣೆ. ಜಾನಪದದ ಪ್ರಕಾರಗಳನ್ನು ವಿವಿಧ ವಿದ್ವಾಂಸರ ಅಭಿಪ್ರಾಯದೊಡನೆ ವಿವರಿಸಿದ್ದಾರೆ. 'ಗೀತೆ' ಎಂಬ ಶೀರ್ಷಿಕೆಯಲ್ಲಿ ಜನಪದ ಗೀತೆ ಹುಟ್ಟಿದ ಬಗೆಯನ್ನು ಚರ್ಚಿಸುತ್ತಾರೆ. ಜನಪದ ಗೀತೆಯಲ್ಲಿ ಕವಿ, ಗಾಯಕ

ಹಾಗೂ ಶ್ರೋತೃ ಮೂವರೂ ಒಂದೇ ಘಟಕವಾಗಿರುತ್ತಾರೆ. ಇಲ್ಲಿ ಕವಿಗಳು ಗಾಯಕನಿಗೂ ಇರುವ ಅಂತರವಂತೂ ಬಹುಸೂಕ್ಷ್ಮವಾದುದು. ಜನಪದ ಗೀತೆಗಳು ಹೊಸದಾಗಿ ಹುಟ್ಟುವುದಕ್ಕಿಂತ ಹಳೆಯ ಗೀತೆಗಳೆ ಗಾಯಕರ ಕೈಯಲ್ಲಿ ಅಥವಾ ಬಾಯಲ್ಲಿ ಬೆಳೆಯುತ್ತಾ ಹೋಗುವುದೇ ಹೆಚ್ಚು ಸಂಭವನೀಯ. ಪ್ರತಿಯೊಬ್ಬ ಕವಿ ಅಥವಾ ಗಾಯಕ ಮೊದಲೇ ಅಸ್ತಿತ್ವದಲ್ಲಿರುವ ಸಾಮಗ್ರಿಯನ್ನು ಪುನಃ ಸೃಜಿಸುತ್ತಾನಷ್ಟೆ. ಅವನು ನಿರಂತರವಾಗಿ ಸೇರಿಸುತ್ತಾನೆ, ಪರಿಷ್ಕರಿಸುತ್ತಾನೆ. ಆಗಾಗ ಬದಲಿಸುತ್ತಾನೆ. ಈ ಬೆಳವಣಿಗೆ ಬದಲಾವಣೆಗಳಿಂದ ಭಿನ್ನಪಾಠಗಳು, ಪಾಠ ಸಂಪ್ರದಾಯಗಳು, ಭಿನ್ನರೂಪಗಳು ಹುಟ್ಟಿಕೊಳ್ಳುತ್ತವೆ' ಹೀಗೆ ಅವರು ಹೇಳುವ ವಿಚಾರಗಳು ನಮ್ಮನ್ನು ಹೆಚ್ಚಿನ ಆಲೋಚನೆಗೆ ಒಡ್ಡುತ್ತವೆ.

'ಜನಪದ ಗೀತೆ' ಸಿ.ಪಿ.ಕೆ. ಅವರು ಜಾನಪದ ಕ್ಷೇತ್ರಕ್ಕೆ ಕೊಟ್ಟ ಮತ್ತೊಂದು ಕೃತಿಯಾಗಿದೆ. ಕೇವಲ ಮೂವತ್ತೆರಡು ಪುಟದಷ್ಟಿರುವ ಈ ಕೃತಿಯಲ್ಲಿ ಜಾನಪದ ಅಧ್ಯಯನದ ವ್ಯಾಪ್ತಿಯಲ್ಲಿ ಜನಪದ ಗೀತೆಗಳ ಮೂಲ ವಿಕಾಸ, ಅದರ ಮಹತ್ವ, ಬೃಹತ್ತುಗಳನ್ನು ವೈಜ್ಞಾನಿಕವಾಗಿ, ಸೈದ್ಧಾಂತಿಕವಾಗಿ, ಆಳವಾದ ಹರಿತವಾದ ಚಿಂತನೆಯಿಂದ ವಿವೇಚಿಸಿದ್ದಾರೆ.

ಜನಪದ ಗೀತೆಗೆ 'ಹಳ್ಳಿಯ ಹಾಡುಗಳು' ಎಂದು ಕರೆದರೆ ಅದು ಅರ್ಥವತ್ತಾದ ಮಾತಾಗುತ್ತದೆ ಎನ್ನುತ್ತಾರೆ. ಮುಂದುವರಿದು 'ಒಂದು ಗೀತೆ ಜನಪದರಲ್ಲಿ ಪ್ರಚುರವಾಗಿದ್ದರೆ ಸಾಕು, ಅದು ಜನಪದ ಗೀತೆ ಎನಿಸಿಕೊಳ್ಳುತ್ತದೆ' ಎನ್ನುತ್ತಾರೆ. ಮೊದಲ ಕಲ್ಪನೆ ಇವತ್ತಿನ ಸಾಮಾಜಿಕ ಬೆಳವಣಿಗೆಯ ಸಂದರ್ಭದಲ್ಲಿ ಪರಿಮಿತವಾಗಬಹುದು. ಎರಡನೆಯ ನಿಲುವು ಎಂದಿಗೂ ಸೂಕ್ತವಾಗುವಂತಹುದು. ಕಲೆಗಾಗಿ

ಬರೆದ ಶಿಷ್ಟ ಕಾವ್ಯ ಕಲೆಯಾಗದಿದ್ದರೆ ಬೇರೆಲ್ಲೂ ಬೇಡವಾಗುತ್ತದೆ ಎಂಬ ಸಿ.ಪಿ.ಕೆ. ಅವರ ವಿವೇಚನೆಯನ್ನು ಒಪ್ಪಬಹುದಾಗಿದೆ. ಜನಪದ ಗೀತೆಗಳನ್ನು ಸಿ.ಪಿ.ಕೆ. ಅವರು ಈ ರೀತಿಯಾಗಿ ವರ್ಗೀಕರಿಸಿದ್ದಾರೆ.

'ಜನಪದ ಗೀತೆಗಳನ್ನು ಹಲವು ಬಗೆಯಾಗಿ ವರ್ಗೀಕರಿಸಬಹುದು. ಅವುಗಳಲ್ಲಿ ಗೀತೆಗಳು ಹಾಗೂ ಕಥನ ಗೀತೆಗಳು ಎಂದು ಎರಡು ದೊಡ್ಡ ಗುಂಪುಗಳು ಏರ್ಪಡುತ್ತವೆ. ಗೀತೆಗಳಲ್ಲಿ ಮತ್ತೆ ಭಾವಗೀತೆಗಳು, ಧಾರ್ಮಿಕ ಗೀತೆಗಳು, ಮಾಂತ್ರಿಕ ಗೀತೆಗಳು, ಕಾಯಕಗೀತೆಗಳು, ಕ್ರೀಡಾಗೀತೆಗಳು, ನಾಟ್ಯಗೀತೆಗಳು, ಶಿಶುಗೀತೆಗಳು ಇತ್ಯಾದಿಯಾಗಿ ಭೇದ ಕಲ್ಪಿಸಬಹುದು. ಕುಡಿತದ ಹಾಡುಗಳು, ರಾಜಕೀಯ ಸ್ವರೂಪದ ವಿಡಂಬನ ಗೀತೆಗಳು, ಗದ್ಯಮಿಶ್ರಿತ ಗೀತೆಗಳು, ಬೀದಿಹೋಕ ವ್ಯಾಪಾರಿಗಳ ಗೀತೆಗಳು ಮುಂತಾದವು ಉಂಟು. ಭಾವಗೀತೆಗಳನ್ನು ಪುನಃ ಪ್ರೇಮಗೀತೆಗಳು, ಶೋಕಗೀತೆಗಳು, ಹಾಸ್ಯಗೀತೆಗಳು, ಭಕ್ತಿಗೀತೆಗಳ ಪ್ರಮುಖ ಗುಣಗಳೆಂದರೆ ತೀವ್ರವಾದ ವ್ಯಕ್ತಿ ನಿಷ್ಠತೆ (Subjectivity) ಮತ್ತು ಭಾವತೀವ್ರತೆ. ಅವು ಒಮ್ಮೊಮ್ಮೆ ಭಾವಾತಿಸಾರದತ್ತ ಒಲೆಯಲೂಬಹುದು'. ಹೀಗೆ ಜನಪದ ಗೀತೆಯ ಹುಟ್ಟು ಅದರ ಲಕ್ಷಣ, ಸ್ವರೂಪ, ವರ್ಗೀಕರಣ, ಕ್ರಿಯಾತ್ಮಕ ಅದರ ಅಗ್ಗಳಿಕೆ ಮುಂತಾದ ವಿಚಾರಗಳನ್ನು ಈ ಕೃತಿಯಲ್ಲಿ ಚರ್ಚಿಸಿದ್ದಾರೆ. ಜನಪದ ಗೀತೆಗೆ ಪ್ರವೇಶಿಕೆಯಂತಿರುವ ಇದರಲ್ಲಿ ವಿವಿಧ ವಿದ್ವಾಂಸರ ವ್ಯಾಖ್ಯಾನಗಳನ್ನು ಕೃತಿಯಲ್ಲಿ ಸಿ.ಪಿ.ಕೆ. ನೀಡಿರುವುದು ಓದುಗರಿಗೆ ಮಾಹಿತಿ ದೊರೆಯುವುದರಲ್ಲಿ ಸಂದೇಹವಿಲ್ಲ. ಗೀತೆಗಳ ಮೂಲ-ವಿಕಾಸ-ವಿಶೇಷ ಮತ್ತು ಮಹತ್ವಗಳನ್ನು ನಿಖರ ಮಾತುಗಳಲ್ಲಿ ಸೈದ್ಧಾಂತಿಕವಾಗಿ ಸಿ.ಪಿ.ಕೆ. ಅವರು ವಿವರಿಸಿರುವುದು ಅವರ ಗುಣಗ್ರಾಹೀ ಚಿಂತನೆಗೆ ಪ್ರತೀಕವಾಗಿದೆ.

'ಗಂಧದ ಕೋಟೆ ಗಮಗಮ' (1982), 'ಚೆಲುವಯ್ಯ ವರನಂದಿ' (1987) ಈ ಎರಡೂ ಗದ್ಯಾನುವಾದವನ್ನು ಕುರಿತ ಗ್ರಂಥಗಳಾಗಿವೆ. ಮೊದಲ ಕೃತಿಯಲ್ಲಿ ಕ.ರಾ.ಕೃ. ಅವರ 'ಜೇನ ಹನಿಗಳು' ಮತ್ತು 'ಜಾನಪದ ಪ್ರೇಮಗೀತೆಗಳು' ಸಂಕಲನಗಳ ಕೆಲವು ಗೀತೆಗಳನ್ನು ಆಯ್ದು ಅವುಗಳ ಗದ್ಯಾನುವಾದವನ್ನು ಒದಗಿಸಿದ್ದಾರೆ. 'ಚೆಲುವಯ್ಯ ವರನಂದಿ' ಇಲ್ಲಿ ಜನಪದ ಕಥನ ಗೀತೆಯೊಂದರ ಗದ್ಯಾನುವಾದವಿದೆ. ಚೆಲುವಯ್ಯ ವರನಂದಿಯರ ಆದರ್ಶಪ್ರೇಮವನ್ನು ಜನಪದ ಕವಿಗಳು ಸ್ವಾರಸ್ಯಪೂರ್ಣವಾಗಿ ವರ್ಣಿಸಿರುವ ರೀತಿ ಬಗೆಬಗೆಯಾಗಿದೆ.

ಚುಂಚನಗಿರಿ, ಹಬ್ಬಲಿ ಅವರ ರಸಬಳ್ಳಿ, ಮುತ್ತು ತುಂಬೇವು ಕಣಜಾಕೆ ಮುಂತಾದ ಸ್ಮರಣ ಸಂಚಿಕೆಗಳ ಸಂಪಾದಕರಾಗಿಯೂ ಸಿ.ಪಿ.ಕೆ. ಅವರ ಸಾಧನೆಯಿದೆ. 1988ರಲ್ಲಿ ಕಾಡಿನಹಾಡುಗಳು (ಮೂಲ ಸಂಗ್ರಹಕರು ವೆರಿಯರ್ ಎಲಿನ್, ಶ್ಯಾಮರಾವ್ ಹೋಮ್) ಸ್ಟಿತ್ ಥಾಂಸನ್‌ನ 'ಜನಪದ ಕಥೆ' (ರಾಗೌ ಅವರೊಡನೆ), ಕಾಡಿನ ಎಲೆಗಳು (ವೆರಿಯರ್ ಎಲ್ವಿನ್ನರ ದಿನಚರಿ). ಹೀಗೆ ಹಲವಾರು ಕೃತಿಗಳನ್ನು ಅನುವಾದಿಸಿ ಜಾನಪದ ಅಧ್ಯಯನದ ಶ್ರೀಮಂತಿಕೆಗೆ ಕಾರಣರಾಗಿದ್ದಾರೆ. ಒಟ್ಟಿನಲ್ಲಿ ಜಾನಪದ ಕ್ಷೇತ್ರದಲ್ಲಿ ಬೆರಳೆಣಿಕೆಯಷ್ಟು ಕೃತಿಗಳನ್ನು ಹೊರತಂದರೂ ಅವು ಗಟ್ಟಿ ಕೃತಿಗಳಾಗಿವೆ. ವಿದ್ವತ್ಪೂರ್ಣ ಕೃತಿಗಳಾಗಿವೆ. ಕನ್ನಡ ಜಾನಪದದಲ್ಲಿ ಸಂಗ್ರಹಕಾರ್ಯ ಶಾಸ್ತ್ರೀಯವಾಗಿ ನಡೆಯುತ್ತಿದ್ದ ಕಾಲದಲ್ಲಿ ಸಿ.ಪಿ.ಕೆ. ಜನಪದ ಸಾಹಿತ್ಯವನ್ನು ಕುರಿತಂತೆ ಸಾಹಿತ್ಯಕ ತಾತ್ವಿಕ ಚಿಂತನೆಗಳಿಂದ ಜಾನಪದ ಸಾಹಿತ್ಯಕ್ಕೆ ಒಂದು ಮೆರಗನ್ನು ಕೊಟ್ಟವರಾಗಿದ್ದಾರೆ. ಅಂದಿನ ಸಂದರ್ಭದಲ್ಲಿ ಹಲವು ವಿದ್ವಾಂಸರ ಕೃತಿಗಳಿಗೆ ಮುನ್ನುಡಿಗಳನ್ನು ಬರೆದು ಜಾನಪದವನ್ನು ಬೌದ್ಧಿಕ ಜಿಜ್ಞಾಸೆಗೆ ಒಳಪಡಿಸಿದ ಗಂಭೀರ ವಿಮರ್ಶಕರಾಗಿ

ಕಂಡುಬಂದವರು. ಒಟ್ಟಿನಲ್ಲಿ ಕನ್ನಡ ಜಾನಪದ ಕ್ಷೇತ್ರಕ್ಕೆ ಅಧ್ಯಯನಕ್ಕೆ ಪೂರಕಸಾಮಗ್ರಿ ಹಾಗೂ ತಾತ್ವಿಕಚೌಕಟ್ಟಿನಲ್ಲಿ ಸಾತ್ವಿಕವಿಮರ್ಶೆ ನಮಗೆ ಅರ್ಥವಂತಿಕೆಯಿಂದ ಕೂಡಿದೆ ಎನ್ನಬಹುದು.

ಸಾಹಿತ್ಯದ ಸರ್ವಪ್ರಕಾರದಲ್ಲಿಯೂ ಉತ್ಕೃಷ್ಟ ಸಾಹಿತ್ಯವನ್ನು ಕೊಟ್ಟಂತಹ ಸಿ.ಪಿ.ಕೆ. ಅವರು ನಿವೃತ್ತಿಯ ಅನಂತರ ಹಲವಾರು ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ಗ್ರಂಥ ಪ್ರಕಟಣ ಸಮಿತಿಯ ಅಧ್ಯಕ್ಷರಾಗಿ, 'ಪ್ರಬುದ್ಧ ಕರ್ನಾಟಕ' ಪತ್ರಿಕೆಯ ಸಂಪಾದಕರಾಗಿ, 'ಪುಸ್ತಕ ಪ್ರಪಂಚ' ಪತ್ರಿಕೆಯ ಸಂಪಾದಕ ಮಂಡಲಿ, ಸಮಗ್ರ ವಚನ ಸಂಪುಟಗಳ ಸಂಪಾದಕ ಮಂಡಲಿ, ರಾಜ್ಯ ಗ್ರಂಥಾಲಯ ಇಲಾಖೆಯ ಪುಸ್ತಕ ಆಯ್ಕೆ ಉನ್ನತ ಸಮಿತಿ, ಪಂಪ ಪ್ರಶಸ್ತಿ ಆಯ್ಕೆ ಸಮಿತಿ, ಕರ್ನಾಟಕ ವಿಶ್ವವಿದ್ಯಾನಿಲಯದ ಕನಕಪೀಠದ ಸಲಹಾ ಸಮಿತಿ ಇತ್ಯಾದಿಗಳ ಸದಸ್ಯರಾಗಿ ಸಿ.ಪಿ.ಕೆ. ಅವರು ಸೇವೆಸಲ್ಲಿಸಿದ್ದಾರೆ. ಅವರು ಸ್ವಲ್ಪಕಾಲ ಮೈಸೂರಿನ ಜ್ಞಾನೋದಯ ಪರಿಷತ್ತಿನ ಹಾಗೂ ವಿವೇಕಜಾಗೃತ ಬಳಗದ ಗೌರವಾಧ್ಯಕ್ಷರಾಗಿದ್ದಾರೆ.

ರಾಜ್ಯಮಟ್ಟದ ಮತ್ತು ರಾಷ್ಟ್ರಮಟ್ಟದ ಹಲವಾರು ವಿಚಾರ ಸಂಕಿರಣಗಳಲ್ಲಿ, ಕಮ್ಮಟಗಳಲ್ಲಿ ಮತ್ತು ಕವಿಗೋಷ್ಠಿಗಳಲ್ಲಿ, ಸಿ.ಪಿ.ಕೆ. ಅವರು ಭಾಗವಹಿಸಿದ್ದಾರೆ. ಹಲವಾರು ಸಮ್ಮೇಳನಗಳಿಗೆ ಅಧ್ಯಕ್ಷ ಪದವಿಗಳನ್ನು ಅಲಂಕರಿಸಿದರು. ಲಖ್ನೋದಲ್ಲಿ ನಡೆದ 1998ರ ಅಖಿಲ ಭಾರತ ಗಣರಾಜ್ಯೋತ್ಸವ ಕವಿಗೋಷ್ಠಿಯಲ್ಲಿ ಅವರು ಕನ್ನಡವನ್ನು ಪ್ರತಿನಿಧಿಸಿದವರಾಗಿದ್ದಾರೆ

ಕನ್ನಡ ಸಾಹಿತ್ಯ ಪರಿಷತ್ತು ತನ್ನ ವಜ್ರ ಮಹೋತ್ಸವ ಸಂದರ್ಭದಲ್ಲಿ ಸಿ.ಪಿ.ಕೆ. ಅವರನ್ನು ಭಾಷಾಂತರ ಕ್ಷೇತ್ರದಲ್ಲಿ ಸಲ್ಲಿಸಿದ

ಸೇವೆಗಾಗಿ ಸನ್ಮಾನಿಸಿತು. ಹೀಗೆ ಹಲವಾರು ಸನ್ಮಾನ, ಪ್ರಶಸ್ತಿ, ಪುರಸ್ಕಾರಗಳನ್ನು ಗಳಿಸಿದ್ದಾರೆ. ತಮ್ಮ ಅನೇಕ ಪುಸ್ತಕಗಳಿಗಾಗಿ ರಾಜ್ಯ ಸರ್ಕಾರದ ಸಾಹಿತ್ಯ ಮತ್ತು ಸಂಸ್ಕೃತಿ ಅಭಿವೃದ್ಧಿ ಇಲಾಖೆ, ರಾಜ್ಯ ಸಾಹಿತ್ಯ ಅಕಾಡೆಮಿ, ಮೈಸೂರು ವಿಶ್ವವಿದ್ಯಾನಿಲಯ, ಇಲಕಲ್ಲು ಮಠ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ವಚನ ಸಾಹಿತ್ಯ ಅಕಾಡೆಮಿ ಮುಂತಾದವುಗಳ ಬಹುಮಾನಗಳನ್ನು ಗಳಿಸಿದ್ದಾರೆ.

ಅವರ 'ವಚನ ವಿಲೋಕನ' ಕೃತಿಗೆ ಬಸವ ವೇದಿಕೆಯ 'ಬಸವ ಸಾಹಿತ್ಯ ಶ್ರೀ' ಪುರಸ್ಕಾರ ಲಭಿಸಿವೆ. ಚಿತ್ರದುರ್ಗದ ಬೃಹನ್ಮಠ ಅವರಿಗೆ 'ವಿದ್ವತ್‌ಶಿರೋಮಣಿ ಪ್ರಶಸ್ತಿ'ಯನ್ನಿತ್ತಿದೆ. ಮುಕ್ತಕ ಸಾಹಿತ್ಯ ಅಕಾಡೆಮಿಯ 'ಹನಿಗವನದ ಹರಿಕಾರ' ಎಂಬ ಪ್ರಶಸ್ತಿಗೂ ಸಿ.ಪಿ.ಕೆ. ಪಾತ್ರರಾಗಿದ್ದಾರೆ. ಇವು ಸಿ.ಪಿ.ಕೆ. ಅವರಿಗೆ ಸಂದಿರುವ ಗೌರವ ಪ್ರಶಸ್ತಿಗಳಲ್ಲಿ ಕೆಲವು. ಕರ್ಣಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಜಾನಪದತಜ್ಞ ಪ್ರಶಸ್ತಿ, ಎಚ್. ಎಲ್. ನಾಗೇಗೌಡ ಜಾನಪದತಜ್ಞ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ವಿಶ್ವಮಾನವ ಪ್ರಶಸ್ತಿ, ಚುಂಚಶ್ರೀ ಪ್ರಶಸ್ತಿ, ರಮಣಶ್ರೀಶರಣ ಪ್ರಶಸ್ತಿ, ಸೀತಾಸುತ ಪ್ರಶಸ್ತಿ, ವಿಶ್ವಮಾನವ ಕುವೆಂಪು ಪ್ರಶಸ್ತಿ, ಫ.ಗು. ಹಳಕಟ್ಟಿ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಹೊಯ್ಸಳ ಪ್ರಶಸ್ತಿ, ಚುಟುಕು ರತ್ನ ಪ್ರಶಸ್ತಿ ಹೀಗೆ ಹಲವು ಪ್ರಶಸ್ತಿಗಳು ಸಂದಿವೆ. ಸಿ.ಪಿ.ಕೆ. ಅವರಿಗೆ 'ಸಾರ್ಥಕ' ಎಂಬ ಅಭಿನಂದನ ಗ್ರಂಥವನ್ನು 1990ರಲ್ಲಿ ಸಮರ್ಪಿಸಲಾಗಿದೆ.

ಒಟ್ಟಿನಲ್ಲಿ ಸಿ.ಪಿ.ಕೆ. ಅವರ ಸಾಹಿತ್ಯ ಕಾವ್ಯ (ಕವನ, ಹನಿಗವನ, ಖಂಡಕಾವ್ಯ, ವಚನ, ಮುಕ್ತಕ) ವಿಮರ್ಶೆ, ವಿಚಾರ, ಭಾಷಾಂತರ, ಚಿಂತನ ಪ್ರಬಂಧ, ಗ್ರಂಥ ಸಂಪಾದನೆ, ಸಂಶೋಧನೆ, ಹಾಸ್ಯ, ಜೀವನ

ಚರಿತ್ರೆ, ಮಕ್ಕಳ ಸಾಹಿತ್ಯ, ಜಾನಪದ ಮುಂತಾದ ಪ್ರಕಾರಗಳಲ್ಲಿ ಪಂಕ್ತಿಗೊಂಡಿದೆ. ಸಿ.ಪಿ.ಕೆ. ಅವರ ಬದುಕೇ ಒಂದು ಸಾಹಿತ್ಯ ಸಮೃದ್ಧಿಯ ಬದುಕಾಗಿದೆ. ರಾಷ್ಟ್ರಕವಿ ಕುವೆಂಪು ಅವರು ಹೇಳಿರುವ ಮಾತುಗಳು ಮನನೀಯವಾಗಿವೆ:

'ಸಿ.ಪಿ.ಕೆ. ಸೃಜನಸಾಹಿತ್ಯ, ವಿಮರ್ಶನ ಸಾಹಿತ್ಯಗಳೆರಡರಲ್ಲೂ ಸರಿಸಮಾನ ಪ್ರತಿಭೆಯಿಂದ ಸಿದ್ಧಹಸ್ತರಾಗಿ ಮುಂದುವರಿಯುತ್ತಿದ್ದಾರೆ. ಅವರ ಸಾಹಿತ್ಯ ಗಾತ್ರದಲ್ಲಿ ಮಾತ್ರವಲ್ಲದೆ ಗುಣದಲ್ಲಿಯೂ ದೊಡ್ಡದು' ಎಂದಿದ್ದಾರೆ. ಕನ್ನಡ ಸಾಹಿತ್ಯದ ಅನರ್ಘ್ಯರತ್ನ ಸಿ.ಪಿ.ಕೆ. ಅವರು ಕನ್ನಡದಲ್ಲಿ ಚಾರಿತ್ರಿಕ ದಾಖಲೆಯನ್ನು ನಿರ್ಮಿಸಿದ್ದಾರೆ.

ಸಿ.ಪಿ.ಕೆ ಎಂಬ ಕಾವ್ಯನಾಮದಿಂದ ಸುಪ್ರಸಿದ್ಧರಾಗಿರುವ ಡಾ॥ ಸಿ.ಪಿ. ಕೃಷ್ಣಕುಮಾರ್ ಕನ್ನಡ ಸಾಹಿತ್ಯ ದಿಗ್ಗಜರಲ್ಲಿ ಒಬ್ಬರು. ಸಂಖ್ಯೆಯಲ್ಲೂ ಸತ್ವದಲ್ಲೂ ಅವರ ಸಾಹಿತ್ಯಕೃಷಿ ಸಾಹಿತ್ಯಾಸಕ್ತರ ಗಮನ ಸೆಳೆದಿದೆ. ಪ್ರಧಾನವಾಗಿ ಸೃಜನಶೀಲ ಲೇಖಕರಾದ ಅವರು ಜಾನಪದ ಅಧ್ಯಯನದಲ್ಲೂ ಗಂಭೀರವಾಗಿ ತೊಡಗಿಸಿಕೊಂಡು ಮೌಲಿಕ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಜಾನಪದವನ್ನು ಕುರಿತ ಅವರ ವೈಚಾರಿಕ ಚಿಂತನೆಗಳು ಅಧ್ಯಯನಕಾರರಿಗೆ ಉಪಯುಕ್ತವಾಗಿವೆ.

ಪ್ರಸ್ತುತ ಪುಸ್ತಕದಲ್ಲಿ ಡಾ॥ ಟಿ.ಕೆ. ಕೆಂಪೇಗೌಡರು ಸಿ.ಪಿ.ಕೆ ಅವರ ಜಾನಪದ ಸಾಹಿತ್ಯ ಸಾಧನೆಯ ವಿಹಂಗಮ ನೋಟವನ್ನು ನೀಡಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. 1, ಜಲದರ್ಶಿನಿ ಬಡಾವಣೆ, ಎಂ.ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು – 560 054
E-mail : janapadaparishath@hotmail.com